PROVISIONAL ANSWER KEY OF THE WRITTEN EXAMINATION OF PSI(CIVIL)-2018 HELD ON 13.01.2019

**SERIES - C**

| | | | | | | | |
|---|---|---|---|---|---|---|---|
| 1 | a | 26 | a | 51 | a | 76 | a |
| 2 | b | 27 | c | 52 | d | 77 | b |
| 3 | b | 28 | c | 53 | a | 78 | d |
| 4 | d | 29 | b | 54 | c | 79 | c |
| 5 | a | 30 | b | 55 | d | 80 | d |
| 6 | d | 31 | b | 56 | b | 81 | a |
| 7 | c | 32 | a | 57 | b | 82 | a |
| 8 | b | 33 | b | 58 | d | 83 | a |
| 9 | d | 34 | d | 59 | b | 84 | a |
| 10 | c | 35 | a | 60 | a | 85 | b |
| 11 | b | 36 | d | 61 | c | 86 | a |
| 12 | d | 37 | c | 62 | b | 87 | a |
| 13 | d | 38 | c | 63 | c | 88 | c |
| 14 | b | 39 | b | 64 | a | 89 | a |
| 15 | b | 40 | c | 65 | b | 90 | c |
| 16 | b | 41 | a | 66 | c | 91 | a |
| 17 | a | 42 | d | 67 | b | 92 | b |
| 18 | a | 43 | b | 68 | b | 93 | b |
| 19 | a | 44 | d | 69 | c | 94 | d |
| 20 | a | 45 | c | 70 | a | 95 | b |
| 21 | a | 46 | b | 71 | d | 96 | d |
| 22 | b | 47 | b | 72 | b | 97 | b |
| 23 | b | 48 | b | 73 | c | 98 | b |
| 24 | a | 49 | a | 74 | b | 99 | a |
| 25 | a | 50 | c | 75 | c | 100 | b |

www.shikarat.com

# Question Paper, 2018

## Paper – I

Maximum Marks : 50 | Time : 90 Minutes

ಗರಿಷ್ಠ ಅಂಕಗಳು : 50 | ಸಮಯ : 90 ನಿಮಿಷಗಳು

I. **Write an essay in not more than 600 words on any one of the following :** **20**

**ಇವುಗಳಲ್ಲಿ ಯಾವುದಾದರೊಂದರ ಮೇಲೆ 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

1) Our nation today, faces more threats from within than from outside. Discuss.
ಇಂದು ನಮ್ಮ ರಾಷ್ಟ್ರ ಬಾಹ್ಯ ಬೆದರಿಕೆಗಳಿಗಿಂತ ಹೆಚ್ಚಾಗಿ ಆಂತರಿಕ ಬೆದರಿಕೆಗಳನ್ನು ಎದುರಿಸುತ್ತಿದೆ. ಚರ್ಚಿಸಿ.

2) Artificial intelligence and intrusion of privacy.
ಕೃತಕ ಬುದ್ಧಿಮತ್ತೆ ಮತ್ತು ಏಕಾಂತ ಹೇರಿಕೆ.

3) Corporate Farming – A solution to farmers suicides. Discuss.
ಕಾರ್ಪೊರೇಟ್ ಕೃಷಿ – ರೈತರ ಆತ್ಮಹತ್ಯೆಗೆ ಒಂದು ಪರಿಹಾರ. ಚರ್ಚಿಸಿ.

4) "The weak can never forgive. Forgiveness is the attribute of the strong".
''ದುರ್ಬಲನು ಎಂದಿಗೂ ಕ್ಷಮಿಸಲಾರ, ಕ್ಷಮೆ ಬಲಶಾಲಿಯ ಲಕ್ಷಣ''.

5) Is formal education of today getting outdated in a world of online information ?
ಇಂದಿನ ಪ್ರಪಂಚದಲ್ಲಿ ಆನ್‌ಲೈನ್ ಮಾಹಿತಿಯ ಮುಂದೆ ಸಾಂಪ್ರದಾಯಿಕ ಶಿಕ್ಷಣವು ಹಳೆಯದಾಗಿದೆಯೇ ?

II. **Translate the following Paragraph from Kannada to English.** **10**

ವಿದ್ಯಾದಾನದ ಬಗ್ಗೆ ''ಹಸಿದು ಬಂದವನಿಗೆ ನೀವು ಇಂದು ಆಹಾರ ನೀಡಬಹುದು. ಆದರೆ ನಾಳೆ ಅವನು ಅಷ್ಟೇ ಹಸಿದಿರುತ್ತಾನೆ. ಆದರೆ ಅದೇ ವ್ಯಕ್ತಿಗೆ ವಿದ್ಯಾದಾನ ಮಾಡಿದರೆ ಅವನು ಕ್ರಮೇಣ ತನ್ನ ಜೀವನವನ್ನು ತಾನು ನಿಭಾಯಿಸುವ ಸಾಮರ್ಥ್ಯ ಪಡೆಯುತ್ತಾನೆ'' ಎಂಬುದು ವಿವೇಕಾನಂದರ ಮಾತು. ನಾವು ನಮ್ಮ ಬಿಡುವಿನ ವೇಳೆಯನ್ನು ನಮ್ಮಲ್ಲಿನ ವಿದ್ಯೆಯನ್ನು ನಾಲ್ಕಾರು ಜನರಿಗೆ ಕಲಿಸಲು ಬಳಸುವ ಮೂಲಕ ಈ ಮಾತನ್ನು ಕಾರ್ಯರೂಪಕ್ಕೆ ತರಬಹುದು. ನಮ್ಮ ಶಿಕ್ಷಣ ಮಟ್ಟಕ್ಕೆ ಅನುಗುಣವಾಗಿ ಯಾವುದೇ ವಿದ್ಯಾರ್ಥಿಗಳಿಗೆ ಅಥವಾ ಬಡ ವಿದ್ಯಾರ್ಥಿಗಳಿಗೆ ನಿತ್ಯ ನಿಯಮಿತವಾಗಿ ಪಾಠ ಹೇಳಿಕೊಡುವುದರಿಂದ ವಿದ್ಯಾರ್ಥಿಗಳ ಭವಿಷ್ಯವೂ ಗಟ್ಟಿಯಾಗುತ್ತದೆ. ನಮ್ಮ ಸಮಯವೂ ಸಾರ್ಥಕ ಹೊಂದುತ್ತದೆ. ಜೊತೆಗೆ ಇಂದು ಶಿಕ್ಷಣ ಕ್ಷೇತ್ರದಲ್ಲಿ ಬೇರು ಬಿಟ್ಟಿರುವ ''ಮನೆಪಾಠ''ದ ಪಿಡುಗನ್ನು ಸಹ ನಿರ್ಮೂಲನೆ ಮಾಡಬಹುದಾಗಿದೆ.

ವಿದ್ಯೆ ಎಂದರೆ ಕೇವಲ ಪಠ್ಯಪುಸ್ತಕವಲ್ಲ, ನಮಗೆ ತಿಳಿದಿರುವ ಕಲೆ, ಭಾಷೆ, ತಂತ್ರಜ್ಞಾನ, ವಿಜ್ಞಾನ, ಕೃಷಿ ಮುಂತಾದ ಯಾವುದೇ ವಿಷಯವನ್ನು ಕುರಿತು ವಯೋಮಾನದ ಭೇದವಿಲ್ಲದೆ ಅಗತ್ಯವಿರುವವರಿಗೆ ಹೇಳಿಕೊಟ್ಟಲ್ಲಿ ಅದರಿಂದ ಅವರುಗಳು ಉಪಕೃತರಾಗುತ್ತಾರೆ.

III. **Translate the following gist into Kannada.** **10**

Gender inequality is the main social issue in India in which women are getting back in the male dominated country. Women empowerment needs to take a high speed in this country to equalize the value of both genders, Uplifting of women in all means should be the utmost priority of the nation. Inequalities between men and women in the society generate lots of problems which become a big obstruction in the way to success of nation. It is the birth rights of the women to get equal value to the men in the society. To really bring empowerment, every woman needs to be aware about their rights from their own end. They need to take positive

**P.T.O.**

www.shikarat.com

steps and involve in every activities instead of only involving in the household chores and family responsibilities. They should know about all the happenings in their surroundings and country.

Women empowerment has the power to change many things in the society and country. They are much better than men to deal with certain problems in the society. They can better understand the disadvantages of the overpopulation for their family and country. They are fully able to handle the economic conditions of the family and country through proper family planning. Women are capable enough to handle any impulsive violence in comparison to the men whether in the family or society.

IV. **Write a summary (Précis) of the Kannada passage given below by reducing to 1/3 of the size and provide a suitable title.** 10

ಉತ್ತಮ ದೇಹದಾರ್ಢ್ಯತೆ ಉಳ್ಳವನ ದೇಹದಲ್ಲಿ ಉತ್ತಮ ಮನಸ್ಸು ಇರುತ್ತದೆ. ಬೌದ್ಧಿಕ ಕಾರ್ಯಗಳಿಂದ, ಇನ್ನಿತರ ಕಾರ್ಯಗಳಿಂದಾದ ಬೇಸರವನ್ನು ಕ್ರೀಡೆಗಳು ಇಲ್ಲವೆ ಆಟಗಳು ಹೋಗಲಾಡಿಸುತ್ತವೆ. ಉತ್ತಮ ಸದೃಢ ಅಂಗಗಳನ್ನು ಪಡೆಯಬೇಕಾದರೆ ಸತತವಾದ ಪರಿಶ್ರಮ ಮತ್ತು ಅಭ್ಯಾಸ ಬೇಕು. ಆಟಗಳಿಂದಾಗಿ ಅಂಗಾಂಗಗಳು ಬೆಳವಣಿಗೆ ಹೊಂದಿ ಸದೃಢವಾಗುತ್ತದೆ.

ಆಟಗಳಲ್ಲಿ ಪ್ರತಿಭೆ ಹೊರಡುತ್ತದೆ. ಸಾಂಘಿಕ, ಸಹಕಾರ ಭಾವನೆಗಳು ಬೆಳೆಯುತ್ತವೆ. ಇಂದಿನ ಮಕ್ಕಳು ನಾಳಿನ ನಾಗರೀಕ. ಆದ್ದರಿಂದ ಇಂತಹ ಸಾಂಘಿಕ ಭಾವನೆ ಬೆಳೆದು ಬಂದರೆ ಮುಂದಿನ ಸಮಾಜ ಉತ್ತಮವಾಗಿರುತ್ತದೆ. ಇಂದು ರಾಜಕೀಯದಲ್ಲಿ ಕಾಣುವ ಪಕ್ಷದ ವಿಭಜನೆ, ಪಕ್ಷಾಂತರ, ಒಬ್ಬರನ್ನೊಬ್ಬರು ವಿನಾಕಾರಣ ದೂಷಿಸುವ ಗುಣ ಹೆಚ್ಚಾಗಿ ಕಾಣುತ್ತಿದೆ. ಕ್ರೀಡೆ/ಆಟಗಳಲ್ಲಿ ಪರಿಣಿತರಾಗಿ ಸಾಂಘಿಕ ಭಾವನೆ ಬೆಳೆಸಿಕೊಂಡ ವ್ಯಕ್ತಿಗಳು ರಾಜಕೀಯದಲ್ಲಿ ಬಂದರೆ ಅವರಲ್ಲಿ ದೂಷಿಸುವ ಗುಣವಿರುವುದಿಲ್ಲ ಹಾಗೂ ಹೊಂದಿಕೊಂಡು ಹೋಗುವ ಗುಣವಿರುತ್ತದೆ. ಸೋಲು-ಗೆಲುವುಗಳನ್ನು ಸಮಾನವಾಗಿ ಕಾಣುವ ಹಾಗೂ ಜಯ ಸಂಪಾದಿಸಲು ಸದಾ ಕಾರ್ಯನಿರತನಾಗಿರತಕ್ಕ ಗುಣ ಬೆಳೆಯುವುದು - ಮನಸ್ಸು ಹಿಡಿತದಲ್ಲಿಟ್ಟುಕೊಂಡು, ಸುಖ-ದುಃಖವನ್ನು ಸಮನಾಗಿ ಕಾಣುವ ಭಾವನೆ ಬೆಳೆದು ಬರುವುದು ಕ್ರೀಡೆಗಳಿಂದ. ಯಾವುದೇ ಸಂದರ್ಭದಲ್ಲಿ ಧೈರ್ಯಗೆಡದೆ, ಸಮಚಿತ್ತ ಹಾಗೂ ದಿಟ್ಟತನದಿಂದ ಹೋರಾಡುವ ಕಲೆ ಬೆಳೆಯುವುದು, ನ್ಯಾಯಬದ್ಧ, ಸಾಹಸಯುಕ್ತ ಕಾರ್ಯಗಳನ್ನು ಹೊಸಹೊಸ ತಂತ್ರಗಳನ್ನು ಅಳವಡಿಸಿಕೊಳ್ಳಲು ಸಹಾಯಕವಾಗಿದೆ. ಜೀವನವನ್ನು ಧೈರ್ಯದಿಂದ ಎದುರಿಸಲು ಸಹಕಾರಿಯಾಗುತ್ತದೆ.

ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಇತರೆ ರಾಷ್ಟ್ರಗಳೊಂದಿಗೆ ಮಿತ್ರತ್ವ, ದೇಶಾಭಿಮಾನ, ರಾಷ್ಟ್ರೀಯತೆ, ನೂತನ ಆವಿಷ್ಕಾರ, ವಿಧಾನಗಳ ಬಗ್ಗೆ ಸಹ ಜ್ಞಾನ ಪಡೆಯಬಹುದು.

---

www.shikarat.com

ಶ್ರೇಣಿ

**C**

ಪ್ರಶ್ನೆ ಪತ್ರಿಕೆ ಸಂಖ್ಯೆ 1148998

# ಪ್ರಶ್ನೆ ಪತ್ರಿಕೆ – 2018
# (ಪತ್ರಿಕೆ – II)

## ಪರೀಕ್ಷಾರ್ಥಿಗಳಿಗೆ ಸೂಚನೆಗಳು

ಗರಿಷ್ಠ ಅಂಕಗಳು : 150 | ಅವಧಿ : 90 ನಿಮಿಷಗಳು

1. ಈ ಪ್ರಶ್ನೆ ಪತ್ರಿಕೆಯಲ್ಲಿ 100 ಪ್ರಶ್ನೆಗಳಿವೆ. ಎಲ್ಲಾ ಪ್ರಶ್ನೆಗಳಿಗೂ ಸಮನಾದ ಅಂಕಗಳಿರುತ್ತವೆ. ಪ್ರತಿ ಪ್ರಶ್ನೆಗೆ 1.50 ಅಂಕ ಇರುತ್ತದೆ. ಪ್ರತಿ ತಪ್ಪು ಉತ್ತರಕ್ಕೆ ಶೇಕಡ 25 ರಷ್ಟು ಅಂದರೆ 0.375 ಅಂಕಗಳನ್ನು ಕಳೆಯಲಾಗುವುದು.
2. ನಿಮ್ಮ ಅರ್ಜಿ ಸಂಖ್ಯೆ, ನೋಂದಣಿ ಸಂಖ್ಯೆ, ಪ್ರಶ್ನೆ ಪತ್ರಿಕೆಯ ಶ್ರೇಣಿ ಹಾಗೂ ಉತ್ತರ ಪತ್ರಿಕೆಯಲ್ಲಿ ನಿಮ್ಮ ಎಡಗೈ ಹೆಬ್ಬೆರಳಿನ ಗುರುತು, ಸಹಿ ಹಾಗೂ ಪರೀಕ್ಷಾ ಕೊಠಡಿಯಲ್ಲಿರುವ ಮೇಲ್ವಿಚಾರಕರ ಸಹಿಯನ್ನು ನಿಗದಿತ ಜಾಗದಲ್ಲಿ ಹಾಕಬೇಕು.
3. ಪ್ರಶ್ನೆ ಪತ್ರಿಕೆಯ ಶ್ರೇಣಿಯ ಕೋಡ್ (**A**, **B**, **C**, **D** ಅಥವಾ **E**) ನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಒದಗಿಸಲಾಗಿರುವ ಸೂಕ್ತ ಸ್ಥಳದಲ್ಲಿ ಬರೆದು ಸಂದರ್ಭಾನುಸಾರ ಸಂಕೇತ (ಎನ್‌ಕೋಡ್)ಗೊಳಿಸಬೇಕು.
4. ಓ.ಎಂ.ಆರ್. ಹಾಳೆಯಲ್ಲಿಯೇ ಉತ್ತರಗಳನ್ನು ಗುರುತು ಮಾಡಬೇಕು. **''ಕಪ್ಪು ಅಥವಾ ನೀಲಿ'' ಶಾಯಿ ಡಾಟ್ ಪೆನ್ ಮಾತ್ರ ಬಳಸಬೇಕು**. ನಿಮ್ಮ ಉತ್ತರ ಪತ್ರಿಕೆಯ ಪ್ರತಿಯನ್ನು ಪರೀಕ್ಷಾವಧಿ ಮುಗಿದ ನಂತರ ತೆಗೆದುಕೊಂಡು ಹೋಗಬಹುದು.
5. ತಿದ್ದಿ ಬರೆಯುವುದು, ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಆಯ್ಕೆ ಮಾಡುವುದು ಅಂತಹ ಉತ್ತರಗಳನ್ನು ತಪ್ಪು ಉತ್ತರಗಳೆಂದು ಪರಿಗಣಿಸಿ ಶೇಕಡ 25 ರಷ್ಟು ಅಂದರೆ 0.375 ಅಂಕಗಳನ್ನು ಕಳೆಯಲಾಗುವುದು ಮತ್ತು ಉತ್ತರ ಗುರುತಿಸದೇ ಖಾಲಿ ಬಿಟ್ಟವುಗಳಿಗೆ ಅಂಕ ನೀಡಲಾಗುವುದಿಲ್ಲ.
6. ನಕಲು ಮಾಡುವುದು, ಸಹ ಪರೀಕ್ಷಾರ್ಥಿಗಳೊಂದಿಗೆ ಮಾತಾಡುವುದು, ವಿಚಾರ ವಿನಿಮಯ ಮಾಡಿಕೊಳ್ಳುವುದು, ಸಲಹೆ ಸೂಚನೆಗಳನ್ನು ನೀಡುವುದು ಕಂಡುಬಂದಲ್ಲಿ ಅಂತಹ ಪರೀಕ್ಷಾರ್ಥಿಗಳನ್ನು '**ಡಿಬಾರ್**' ಮಾಡಲಾಗುವುದು.
7. ಮೊಬೈಲ್ ಫೋನ್, ಕ್ಯಾಲ್‌ಕ್ಯುಲೇಟರ್, ಪೇಜರ್ ಮುಂತಾದ ಸಲಕರಣೆಗಳನ್ನು ಪರೀಕ್ಷಾ ಕೊಠಡಿಗಳಿಂದ ನಿಷೇಧಿಸಲಾಗಿದೆ.
8. ಪ್ರಶ್ನೆ/ಉತ್ತರಗಳ ಬಗ್ಗೆ ಯಾವುದಾದರೂ ಸಂದೇಹ ಉಂಟಾದ ಪಕ್ಷದಲ್ಲಿ ಇಂಗ್ಲೀಷ್ ಭಾಗವನ್ನು ನೋಡಿ ಸಂದೇಹವನ್ನು ನಿವಾರಿಸಿಕೊಳ್ಳಬಹುದು. ಪರೀಕ್ಷಾ ಅವಧಿಯು ಮುಗಿಯುವ ಮುನ್ನ ಪರೀಕ್ಷಾ ಕೊಠಡಿಯಿಂದ ಹೊರಹೋಗಲು ಅನುಮತಿ ದೊರೆಯುವುದಿಲ್ಲ.
9. ಪ್ರಶ್ನೆ ಪತ್ರಿಕೆಯಲ್ಲಿ ಯಾವುದಾದರೂ ದೋಷ ಅಂದರೆ ಮುದ್ರಣ ದೋಷ, ಪುಟಗಳ ಅದಲು ಬದಲು, ಪ್ರಶ್ನೆಗಳ ಪುನರಾವರ್ತನೆ, ಯಾವುದಾದರೂ ಪುಟಗಳು ಇಲ್ಲದಿದ್ದಲ್ಲಿ ಮತ್ತು ಇನ್ನಾವುದೇ ದೋಷ ಕಂಡುಬಂದಲ್ಲಿ ಅದನ್ನು ತಕ್ಷಣ ಕೊಠಡಿಯ ಪರಿವೀಕ್ಷಕರ ಗಮನಕ್ಕೆ ತಂದು ಸ್ಪಷ್ಟೀಕರಣ ಪಡೆಯಬೇಕು ಅಥವಾ ಸರಿಯಾದ ಪ್ರಶ್ನೆಪತ್ರಿಕೆಯನ್ನು ಪಡೆದುಕೊಳ್ಳಬೇಕು. ಸದರಿ ದೋಷಗಳ ಬಗ್ಗೆ ಅಭ್ಯರ್ಥಿಗಳು ಈ ರೀತಿ ಬಗೆಹರಿಸಿಕೊಳ್ಳದಿದ್ದರೆ ಅದಕ್ಕೆ ಅಭ್ಯರ್ಥಿಗಳೇ ಜವಾಬ್ದಾರರು.
10. ಪರೀಕ್ಷೆ ಮುಕ್ತಾಯವನ್ನು ಸೂಚಿಸುವ ಅಂತಿಮ ಘಂಟೆ ಬಾರಿಸಿದ ತಕ್ಷಣವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಕೊಠಡಿಯಲ್ಲಿ ಹಾಜರಾಗಿರುವ ಎಲ್ಲಾ ಅಭ್ಯರ್ಥಿಗಳ ಓ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಸ್ಥಳದಲ್ಲಿಯೇ ಕುಳಿತಿರತಕ್ಕದ್ದು. ಸಂವೀಕ್ಷಕರ ಅನುಮತಿಯ ನಂತರವೇ ಪರೀಕ್ಷಾ ಕೊಠಡಿಯಿಂದ ಹೊರ ಹೋಗುವುದು.

www.shikarat.com

1. ಮಿಲ್‌ವಾಕೀ ಡೀಪ್(ಆಳ), ಜಾವಾ ಟ್ರೆಂಚ್ (ಕಾಲುವೆ) ಮತ್ತು ಚಾಲೆಂಜರ್ ಡೀಪ್‌ಗಳ ನಡುವಿನ ಸಮಾನತೆ ಏನು ?
   (a) ಇವು ಕ್ರಮಬದ್ಧವಾಗಿ ಅಟ್ಲಾಂಟಿಕ್ ಸಾಗರ, ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಮುದ್ರಗಳ ಅತೀ ಆಳವಾದ ಭಾಗಗಳು
   (b) ಇವು ಪೆಸಿಫಿಕ್ ಸಮುದ್ರದಲ್ಲಿರುವ ಕಾಲುವೆಗಳು/ ಕಂದಕಗಳು (ಟ್ರೆಂಚ್)
   (c) ಇದು ಹಿಂದೂ ಮಹಾಸಾಗರದಲ್ಲಿರುವ ಕಾಲುವೆ/ಕಂದಕ (ಟ್ರೆಂಚ್)ಗಳು
   (d) ಇವು ಅಟ್ಲಾಂಟಿಕ್ ಮಹಾಸಾಗರದಲ್ಲಿನ ಆಳ (ಡೀಪ್)ಗಳು

2. ಸಮುದ್ರದ ನೆಲದಿಂದ 1000 ಮೀಟರ್‌ಗಿಂತ ಎತ್ತರಕ್ಕೆ ಇರುವ ಸಬ್‌ಮೆರೀನ್ ಪರ್ವತ ಅಥವಾ ಶಿಖರವನ್ನು ಏನೆಂದು ಕರೆಯುತ್ತಾರೆ ?
   (a) ಗಯಾಟ್‌ಗಳು
   (b) ಸೀಮೌಂಟ್‌ಗಳು
   (c) ಅಬಿಸಲ್ ಬೆಟ್ಟಗಳು
   (d) ಟ್ರೆಂಚ್‌ಗಳು (ಕಾಲುವೆ/ಕಂದಕ)

3. ಈ ಕೆಳಗಿನವುಗಳಲ್ಲಿ ಬೆಚ್ಚಗಿನ ಪ್ರವಾಹ/ಹರಿವು (ವಾರ್ಮ್ ಕರೆಂಟ್) ಯಾವುದು ?
   (a) ಒಯಾ ಶಿಯೊ ಕರೆಂಟ್
   (b) ಕುರೊ ಶಿಯೊ ಕರೆಂಟ್
   (c) ಒಖೋಟ್ಸ್ಕ ಕರೆಂಟ್
   (d) ಪೆರು ಕರೆಂಟ್

4. 2018ರ ಏಶಿಯನ್ ಗೇಮ್ಸ್‌ನ ಶೂಟಿಂಗ್‌ನಲ್ಲಿ ಪ್ರತ್ಯೇಕ ಬಂಗಾರದ ಪದಕವನ್ನು ಗೆದ್ದ ಭಾರತದ ಮೊತ್ತ-ಮೊದಲ ಮಹಿಳೆ ಯಾರು ?
   (a) ಮನು ಭಕೇರ್
   (b) ಅಂಕಿತ ರೈನ
   (c) ಮೆಹುಲಿ ಘೋಶ್
   (d) ರಾಹಿ ಸರ್ನೊಬತ್

1. What is the similarity between Milwaukee Deep, Java Trench and Challenger Deep ?
   (a) They are the deepest points of the Atlantic, Indian and Pacific Oceans, respectively
   (b) They are all trenches in the Pacific Ocean
   (c) They are all trenches in the Indian Ocean
   (d) They are all deeps of the Atlantic Ocean

2. A submarine mountain or peak rising more than 1000 m above the ocean floor is known as
   (a) Guyots
   (b) Seamounts
   (c) Abyssal hills
   (d) Trenches

3. Which of the following is a warm current ?
   (a) Oya Shio current
   (b) Kuro Shio current
   (c) Okhotsk current
   (d) Peru current

4. Who has become the first-ever Indian woman to win an individual gold in shooting at the 2018 Asian Games ?
   (a) Manu Bhaker
   (b) Ankita Raina
   (c) Mehuli Ghosh
   (d) Rahi Sarnobat

www.shikarat.com

5. ವಿಜ್ಞಾನಿಗಳ ಅಂತರರಾಷ್ಟ್ರೀಯ ತಂಡವು ಇತ್ತೀಚಿಗೆ ಬೆಳೆಸಲ್ಪಟ್ಟ ಯಾವ ಬೆಳೆಯ ಜೆನೆಟಿಕ್ ಕೋಡ್‌ನ್ನು ಮೊದಲು ಮುರಿದಿರುವರು ?
(a) ಗೋಧಿ
(b) ಅಕ್ಕಿ
(c) ಮೆಕ್ಕೆಜೋಳ
(d) ದ್ವಿದಳ ಧಾನ್ಯಗಳು

6. ಈ ಕೆಳಗಿನವುಗಳಲ್ಲಿ ಮೂಲಭೂತ ಹಕ್ಕುಗಳನ್ನು ಯಾವುದು ಸಂರಕ್ಷಿಸುತ್ತದೆ ?
(a) ಶಾಸಕಾಂಗ
(b) ಕಾರ್ಯಾಂಗ
(c) ರಾಜಕೀಯ ಪಕ್ಷಗಳು
(d) ನ್ಯಾಯಾಂಗ

7. ಸ್ವತಂತ್ರ ಭಾರತದಲ್ಲಿ ಮೊದಲ ಜನರಲ್ ಇಲೆಕ್ಷನ್ (ಸಾಮಾನ್ಯ ಚುನಾವಣೆ) ಯಾವ ವರ್ಷದಲ್ಲಿ ನಡೆದಿತ್ತು ?
(a) 1947
(b) 1950
(c) 1951
(d) 1948

8. ಸಂವಿಧಾನದ ಯಾವ ವಿಧಿಯ ಅಡಿಯಲ್ಲಿ ಒಬ್ಬ ವ್ಯಕ್ತಿ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಲ್ಲಿ ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಬಹುದು ?
(a) 31 ನೇ ವಿಧಿ
(b) 32 ನೇ ವಿಧಿ
(c) 28 ನೇ ವಿಧಿ
(d) 29 ನೇ ವಿಧಿ

9. ಭಾರತದಲ್ಲಿ ಯಾವ ತಾರೀಖಿಗೆ ಕಿಸಾನ್ ದಿವಸ್ (ರೈತ ದಿನ) ಆಚರಿಸಲ್ಪಡುತ್ತದೆ ?
(a) ಡಿಸೆಂಬರ್ 24
(b) ಡಿಸೆಂಬರ್ 21
(c) ಡಿಸೆಂಬರ್ 22
(d) ಡಿಸೆಂಬರ್ 23

5. The International team of scientists has recently cracked the genetic code of which cultivated crop for the first time ?
(a) Wheat
(b) Rice
(c) Maize
(d) Pulses

6. Which one of the following is the guardian of Fundamental Rights ?
(a) Legislature
(b) Executive
(c) Political Parties
(d) Judiciary

7. The first General Election in Independent India was held in
(a) 1947
(b) 1950
(c) 1951
(d) 1948

8. Under which Article of the Constitution can an individual move the Supreme Court directly in case of any violation of Fundamental Rights ?
(a) Article 31
(b) Article 32
(c) Article 28
(d) Article 29

9. Kisan Diwas is celebrated on which date in India ?
(a) December 24
(b) December 21
(c) December 22
(d) December 23

www.shikarat.com

10. ಇನ್ಫೋಸಿಸ್‌ನ ಹೊಸ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಆಡಳಿತ ನಿರ್ದೇಶಕರಾಗಿ ಯಾರು ಅಧಿಕಾರ ವಹಿಸಿಕೊಂಡಿದ್ದಾರೆ ?
(a) ಮೈಕಲ್ ಪೆಷ್
(b) ನಂದನ್ ನೀಲೇಕಣಿ
(c) ಸಲಿಲ್ ಪರೇಖ್
(d) ಪ್ರವೀಣ್ ರಾವ್

11. "WINGS" ಎಂಬ VOIP ಆಧಾರಿತ ದೂರವಾಣಿ ವ್ಯವಸ್ಥೆಯನ್ನು ಯಾವ ಟೆಲಿಕಾಮ್ ಕಂಪೆನಿಯು ಪ್ರಾರಂಭಿಸಿದೆ ?
(a) ಏರ್‌ಟೆಲ್
(b) ಬಿಎಸ್‌ಎನ್‌ಎಲ್
(c) ರಿಲಯೆನ್ಸ್ ಜಿಯೊ
(d) ವೊಡಾಫೋನ್

12. ಇತ್ತೀಚೆಗೆ ಸಾವನ್ನಪ್ಪಿದ, ಟ್ರಿನಿಡಾಡ್‌ನಲ್ಲಿ ಜನಿಸಿದ ಮೂಲತಃ ಭಾರತದ ಲೇಖಕರಾದ ದಿವಂಗತ ವಿ. ಎಸ್. ನೈಪಾಲ್‌ರವರ ಈ ಕೆಳಗಿನ ಕೃತಿಗಳಲ್ಲಿ ಯಾವುದು ಸೇರುವುದಿಲ್ಲ ?
(a) ಎ ಬೆಂಡ್ ಇನ್ ದಿ ರಿವರ್
(b) ಮ್ಯಾಜಿಕ್ ಸೀಡ್ಸ್
(c) ಎ ಹೌಸ್ ಫಾರ್ ಮಿಸ್ಟರ್ ಬಿಸ್ವಾಸ್
(d) ದಿ ರಿಮೈನ್ಸ್ ಆಫ್ ದಿ ಡೇ

13. ಜಗತ್ತಿನ ಕಾಯ್ದಿಟ್ಟ ಜೀವಗೋಳದ ಜಾಲದಲ್ಲಿ ಸೇರಿದ ಭಾರತದಲ್ಲಿನ ಕಾಯ್ದಿಟ್ಟ ಜೀವಗೋಳದ ಪ್ರಸ್ತುತ ಸಂಖ್ಯೆ ಎಷ್ಟು ?
(a) 8
(b) 9
(c) 10
(d) 11

14. ಕರ್ನಾಟಕ ಪೋಲೀಸ್ ಫ್ಲ್ಯಾಗ್ ಡೇ (ಬಾವುಟ ದಿನ) ವನ್ನು ________ ಆಚರಿಸುತ್ತಾರೆ.
(a) ನವೆಂಬರ್ 1 ರಂದು
(b) ಏಪ್ರಿಲ್ 2 ರಂದು
(c) ಜುಲೈ 26 ರಂದು
(d) ಅಕ್ಟೋಬರ್ 23 ರಂದು

10. Who has taken charge as the new CEO and MD of Infosys ?
(a) Michael Pesch
(b) Nandan Nilekani
(c) Salil Parekh
(d) Pravin Rao

11. Which telecom company has launched a VOIP based phone service "WINGS" ?
(a) Airtel
(b) BSNL
(c) Reliance Jio
(d) Vodafone

12. Which of the following is not a work of late V. S. Naipaul, the Trinidad-born Indian origin Nobel prize winning author who passed away recently ?
(a) A Bend in the River
(b) Magic Seeds
(c) A House for Mr. Biswas
(d) The Remains of the Day

13. What is the current number of India's Biosphere reserves included in the World Network of Biosphere Reserves ?
(a) 8
(b) 9
(c) 10
(d) 11

14. The Karnataka Police Flag Day is celebrated on which date ?
(a) 1st November
(b) 2nd April
(c) 26th July
(d) 23rd October

www.shikarat.com

15. ನ್ಯಾಯ ವಿಚಾರಣೆ ಇಲ್ಲದೆ ಜನಸಾಮಾನ್ಯರನ್ನು ಕೊಲ್ಲುವುದು (ಮಾಬ್ ಲಿಂಚಿಂಗ್) ಮತ್ತು ಹಿಂಸೆಯ ವಿರುದ್ಧ ಕಾನೂನನ್ನು ಸೂಚಿಸಲು ಕೇಂದ್ರ ಸರ್ಕಾರವು ಉನ್ನತ-ಮಟ್ಟದ ಯಾವ ಸಮಿತಿಯನ್ನು ಸೂಚಿಸಿದೆ ?

(a) ಎ. ಕೆ. ಧಾಸಮನ ಸಮಿತಿ
(b) ರಾಜೀವ್ ಗೌಬಾ ಸಮಿತಿ
(c) ಭಾಸ್ಕರ್ ಖುಲ್ಬೆ ಸಮಿತಿ
(d) ಇಂದರ್‌ಜಿತ್ ಸಿಂಗ್ ಸಮಿತಿ

16. ನಾಗರಿಕ ರಾಷ್ಟ್ರೀಯ ನೋಂದಣಿಯ ಮೊದಲ ಕರಡು (ಡ್ರಾಫ್ಟ್) ಯಾವ ರಾಜ್ಯಕ್ಕೆ ಬಿಡುಗಡೆಯಾಯಿತು ?

(a) ನಾಗಾಲ್ಯಾಂಡ್
(b) ಅಸ್ಸಾಂ
(c) ಪಂಜಾಬ್
(d) ಕೇರಳ

17. 2018 ರ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಯಾರು ಪಡೆದಿದ್ದಾರೆ ?

(a) ವಿನೋದ್ ಖನ್ನಾ
(b) ಶರ್ಮಿಳಾ ಠಾಗೋರ್
(c) ಶಾರುಖ್ ಖಾನ್
(d) ಶಶಿ ಕಪೂರ್

18. ಜಪಾನ್ ದ್ವೀಪಸಮುದಾಯದ ಯಾವ ದ್ವೀಪದಲ್ಲಿ 'ಹಿರೋಷಿಮಾ' ಮತ್ತು 'ನಾಗಾಸಾಕಿ' ನಗರಗಳಿವೆ ?

(a) ಹೋನ್‌ಶೂ ಮತ್ತು ಕ್ಯೂಶೂ ಅನುಕ್ರಮವಾಗಿ
(b) ಹೋನ್‌ಶೂ ಮತ್ತು ಶಿಕೋಕು ಕ್ರಮವಾಗಿ
(c) ಹೊಕ್ಕಾಡೊ ಮತ್ತು ಕ್ಯೂಶೂ ಕ್ರಮವಾಗಿ
(d) ಕ್ಯೂಶೂ ಮತ್ತು ಶಿಕೋಕು ಕ್ರಮವಾಗಿ

19. ಈ ಕೆಳಗಿನವರಲ್ಲಿ ಯಾರು ಪಟ್ಟದಕಲ್ಲು ಮತ್ತು ಐಹೊಳೆಗಳ ಸುಂದರ ದೇಗುಲಗಳನ್ನು ನಿರ್ಮಿಸಿದರು ?

(a) ಚಾಲುಕ್ಯರು
(b) ಹೊಯ್ಸಳರು
(c) ಶಾತವಾಹನರು
(d) ರಾಷ್ಟ್ರಕೂಟರು

15. The Union Government has constituted which high-level committee to suggest laws against mob lynching and violence ?

(a) A. K. Dhasmana Committee
(b) Rajiv Gauba Committee
(c) Bhaskar Khulbe Committee
(d) Inderjit Singh Committee

16. The first draft of the National Register of Citizens (NRC) was released for which State ?

(a) Nagaland
(b) Assam
(c) Punjab
(d) Kerala

17. Who won the Dada Saheb Phalke Award for 2018 ?

(a) Vinod Khanna
(b) Sharmila Tagore
(c) Shahrukh Khan
(d) Shashi Kapoor

18. The cities of 'Hiroshima' and 'Nagasaki' are located on which among the following Islands of the Japanese Archipelago ?

(a) Honshu and Kyushu respectively
(b) Honshu and Shikoku respectively
(c) Hokkaido and Kyushu respectively
(d) Kyushu and Shikoku respectively

19. Who among the following had built beautiful temples at Pattadakallu and Aihole ?

(a) Chalukya
(b) Hoysala
(c) Shatavahana
(d) Rashtrakuta

www.shikarat.com

20. ಕಲ್ಯಾಣಿ ಚಾಲುಕ್ಯರಲ್ಲಿ 'ಜಗದೇಕಮಲ್ಲ' ಬಿರುದು ಪಡೆದವರು
(a) ಜಯಸಿಂಹ II
(b) ವಿಜಯಾದಿತ್ಯ VII
(c) ವಿಜಯಾದಿತ್ಯ II
(d) ಸೋಮೇಶ್ವರ I

21. 2018 ರ ಫೀಫಾ ವರ್ಲ್ಡ್ ಕಪ್ ಪಂದ್ಯದಲ್ಲಿ ಗೋಲ್ಡನ್ ಬಾಲ್ ಪ್ರಶಸ್ತಿಯನ್ನು ಗೆದ್ದ ಅತ್ಯುತ್ತಮ ಆಟಗಾರ ಯಾರು ?
(a) ಲುಕಾ ಮಾಡ್ರಿಕ್
(b) ಕೈಲಿಯನ್ ಬಾಪ್ಪೆ
(c) ಹ್ಯಾರಿ ಕೇನ್
(d) ಥಿಬೌಟ್ ಕೌರ್ಟಾಯಿಸ್

22. ಭಾರತದ ಮಿಸ್ಸೈಲ್‌ಗಳಲ್ಲಿ 'ಸೂಪರ್‌ಸಾನಿಕ್ ಕ್ರೂಸ್ ಮಿಸ್ಸೈಲ್' ಯಾವುದು ?
(a) ಅಗ್ನಿ-ವಿ
(b) ಬ್ರಹ್ಮೋಸ್
(c) ಪೃಥ್ವಿ-III
(d) ಆಕಾಶ್

23. 2018 ರ ಗೋಲ್ಡನ್ ಮ್ಯಾನ್ ಬುಕರ್ ಪ್ರಶಸ್ತಿಯನ್ನು ಗೆದ್ದ ಕೃತಿ/ಕಾದಂಬರಿ ಯಾವುದು ?
(a) ಇನ್ ಎ ಫ್ರೀ ಸ್ಟೇಟ್
(b) ದಿ ಇಂಗ್ಲಿಷ್ ಪೇಶಂಟ್
(c) ವುಲ್ಫ್ ಹಾಲ್
(d) ಮೂನ್ ಟೈಗರ್

24. ನಾಗ್ ಮಿಸ್ಸೈಲ್‌ನ್ನು ಅಭಿವೃದ್ಧಿ ಪಡಿಸಿದ ಭಾರತೀಯ ಸಂಸ್ಥೆ ಯಾವುದು ?
(a) ಡಿಆರ್‌ಡಿಒ
(b) ಬಿಎಆರ್‌ಸಿ
(c) ಐಎಸ್‌ಆರ್‌ಒ
(d) ಮೇಲಿನ ಎಲ್ಲವೂ

20. Among the Kalyani Chalukyas, the title of Jagadekamalla was held by
(a) Jayasimha II
(b) Vijayaditya VII
(c) Vijayaditya II
(d) Someshwara I

21. Who received the Golden Ball Award for best player at the 2018 FIFA World Cup ?
(a) Luka Modric
(b) Kylian Mbappe
(c) Harry Kane
(d) Thibaut Courtois

22. Which of the following missiles of India is a "supersonic cruise missile" ?
(a) Agni-V
(b) BrahMos
(c) Prithvi-III
(d) Aakash

23. Which novel has won the 2018 Golden Man Booker Prize ?
(a) In a Free State
(b) The English Patient
(c) Wolf Hall
(d) Moon Tiger

24. The Nag missile has been developed by which Indian organisation ?
(a) DRDO
(b) BARC
(c) ISRO
(d) All of the above

www.shikarat.com

25. ಸಂವಿಧಾನದಲ್ಲಿ ಶಿಕ್ಷಣದ ಹಕ್ಕನ್ನು ಒದಗಿಸುವ ಹೊಸ ಆರ್ಟಿಕಲ್-21ಎ, ಇದನ್ನು ಸೇರ್ಪಡಿಸಿದ ತಿದ್ದುಪಡಿ ಯಾವುದು ?
(a) 86 ನೆಯ ತಿದ್ದುಪಡಿ
(b) 87 ನೆಯ ತಿದ್ದುಪಡಿ
(c) 88 ನೆಯ ತಿದ್ದುಪಡಿ
(d) 89 ನೆಯ ತಿದ್ದುಪಡಿ

26. ಮಹಿಳೆಯರಿಗಾಗಿನ ರಾಷ್ಟ್ರೀಯ ಆಯೋಗವು __________ ನೊಂದಿಗೆ ಅಂತರ್ಜಾಲದ ಸುರಕ್ಷಿತ ಬಳಕೆಯ ಕುರಿತು ಮಹಿಳೆಯರಿಗೆ ತರಬೇತಿ ನೀಡಲು ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮವೊಂದನ್ನು ಆಯೋಜಿಸಲು ಪಾಲುದಾರಿಕೆ ಹೊಂದಿದೆ.
(a) ಫೇಸ್‌ಬುಕ್
(b) ಗೂಗಲ್
(c) ಅಮೇಜಾನ್
(d) ಮೈಕ್ರೋಸಾಫ್ಟ್

27. ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮ (UNEP) __________ ವಿಮಾನ ನಿಲ್ದಾಣವನ್ನು ಜಗತ್ತಿನ ಮೊದಲ ಪೂರ್ಣಪ್ರಮಾಣದ ಸೌರಶಕ್ತಿ ಚಾಲಿತ ವಿಮಾನನಿಲ್ದಾಣವೆಂದು ಗುರುತಿಸಿದೆ.
(a) ಜೈಪುರ
(b) ಬೆಂಗಳೂರು (ಕೆ. ಐ. ಎ. ಎಲ್.)
(c) ಕೊಚ್ಚಿನ್ (ಸಿ. ಐ. ಎ. ಎಲ್.)
(d) ಮಂಗಳೂರು (ಎಂ. ಐ. ಎ. ಎಲ್.)

28. ಅಟಲ್ ಇನ್ನೋವೇಶನ್ ಮಿಷನ್ ನಾವೀನ್ಯತೆ ಸಂಸ್ಕೃತಿ ಪ್ರೋತ್ಸಾಹಿಸಲು ಭಾರತ ಸರ್ಕಾರದ ಒಂದು ಪ್ರಯತ್ನವಾಗಿದ್ದು __________ ದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.
(a) ಪರಿಸರ ಸಚಿವಾಲಯ
(b) ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ
(c) ನೀತಿ ಆಯೋಗ
(d) ರಕ್ಷಣಾ ಸಚಿವಾಲಯ

25. Which Amendment to the Constitution inserted a new Article 21 A providing Right to Education in the Constitution ?
(a) 86th Amendment
(b) 87th Amendment
(c) 88th Amendment
(d) 89th Amendment

26. National Commission for Women has partnered with __________ to launch a Digital literacy program to train women on safe use of internet.
(a) Facebook
(b) Google
(c) Amazon
(d) Microsoft

27. The United Nations Environment Program (UNEP) has recognised __________ airport as the World's first fully solar energy powered airport.
(a) Jaipur
(b) Bengaluru (KIAL)
(c) Cochin (CIAL)
(d) Mangaluru (MIAL)

28. Atal Innovation Mission is a Government of India's endeavour to promote a culture of innovation and is taken up under
(a) Ministry of Environment
(b) Ministry of Science and Technology
(c) NITI Ayog
(d) Ministry of Defence



www.shikarat.com

29. ಇಂದು ಮಲ್ಹೋತ್ರಾ ಇವರು

(a) ಏರ್ ಇಂಡಿಯಾದ ಮೊದಲ ಮಹಿಳಾ ಸಿಎಂಡಿಯಾಗಿದ್ದಾರೆ

(b) ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ಪ್ರಮಾಣವಚನ ಸ್ವೀಕರಿಸಿದ ಮೊದಲ ಮಹಿಳಾ ಹಿರಿಯ ವಕೀಲರಾಗಿದ್ದಾರೆ

(c) ಭಾರತದ ಅಡ್ವೋಕೇಟ್ ಜನರಲ್ ಆಗಿ ನೇಮಕಗೊಂಡ ಮೊದಲ ಮಹಿಳೆಯಾಗಿದ್ದಾರೆ

(d) ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರಾಗಿ ನೇಮಕಗೊಂಡ ಮೊದಲ ಮಹಿಳೆಯಾಗಿದ್ದಾರೆ

30. "ಸಾಗರ್ ಕವಚ್" ಎಂದರೆ

(a) ದೇಶೀಯವಾಗಿ ಅಭಿವೃದ್ಧಿಪಡಿಸಲಾದ ನೌಕಾಪಡೆಯ ವಿಮಾನ ನಿರೋಧಕ ಗನ್

(b) ಕರಾವಳಿ ಭದ್ರತೆಯಲ್ಲಿನ ಲೋಪದೋಷಗಳ ಮೌಲ್ಯಮಾಪನ ಮತ್ತು ಭದ್ರತೆ ಬಲಪಡಿಸಲು ಕಾರ್ಯಾಭ್ಯಾಸ

(c) ಕರಾವಳಿ ಭದ್ರತೆಗಾಗಿ ನಿಯೋಜಿಸಲಾದ ವಿಶೇಷ ತಟರಕ್ಷಣಾಘಟಕ

(d) ದೇಶೀಯವಾಗಿ ಅಭಿವೃದ್ಧಿ ಪಡಿಸಲಾದ ತಟರಕ್ಷಣಾ ನೌಕೆ

31. ಮೊಬೈಲ್ ಟೆಲಿಫೋನಿನಲ್ಲಿ GSM ಎಂದರೇನು ?

(a) ಗ್ಲೋಬಲ್ ಸಿಸ್ಟಮ್ಸ್ ಆಫ್ ಮೊಬೈಲ್ಸ್

(b) ಗ್ಲೋಬಲ್ ಸಿಸ್ಟಮ್ ಆಫ್ ಮೊಬೈಲ್ ಕಮ್ಯುನಿಕೇಶನ್ಸ್

(c) ಗ್ಲೋಬಲ್ ಸ್ಟಾಂಡರ್ಡ್ ಫಾರ್ ಮೊಬೈಲ್ಸ್

(d) ಜನರಲ್ ಸ್ಟಾಂಡರ್ಡ್ ಫಾರ್ ಮೊಬೈಲ್ಸ್

32. BIOS ಎಂದರೇನು ?

(a) ಬೇಸಿಕ್ ಇನ್‌ಪುಟ್ ಔಟ್‌ಪುಟ್ ಸಿಸ್ಟಮ್

(b) ಬೈನರಿ ಇನ್‌ಪುಟ್ ಔಟ್‌ಪುಟ್ ಸಿಸ್ಟಮ್

(c) ಬೇಸಿಕ್ ಇನ್‌ಪುಟ್ ಆಫ್ ಸಿಸ್ಟಮ್

(d) ಮೇಲಿನ ಎಲ್ಲವೂ

33. ಒಬ್ಬ ವ್ಯಕ್ತಿಯ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸಿ ಆ ವ್ಯಕ್ತಿಯೆಂದು ಯಥಾರ್ಥವಾಗಿ (ಕೃತಕವಾಗಿ ನಡೆದುಕೊಳ್ಳುವುದು) ಸೋಗುಹಾಕುವ ಅಪರಾಧವನ್ನು ಏನೆಂದು ಕರೆಯುತ್ತಾರೆ ?

(a) ಸ್ಪೂಲ್ ಮಾಡುವುದು

(b) ಗುರುತು ಅಪಹರಣ

(c) ವಂಚನೆ (ಸ್ಪೂಫ್) ಮಾಡುವುದು

(d) ಹ್ಯಾಕ್ ಮಾಡುವುದು

29. Indu Malhotra is

(a) First Woman CMD of Air India

(b) First Woman Senior Advocate to be recently sworn in as Judge of Supreme Court

(c) First Woman to be appointed as Advocate General of India

(d) First Woman to be appointed as Comptroller and Auditor General of India

30. "Sagar Kavach" stands for

(a) Indigenously developed Naval Anti Aircraft Gun

(b) An exercise to strengthen and assess loopholes in costal security

(c) A special unit of Coast Guard deployed for Costal Security

(d) Indigenously developed Coast Guard Ship

31. In Mobile telephony, GSM stands for

(a) Global Systems of Mobiles

(b) Global System of Mobile Communications

(c) Global Standard for Mobiles

(d) General Standard for Mobiles

32. BIOS stands for ?

(a) Basic Input Output System

(b) Binary Input Output System

(c) Basic Input Off System

(d) All the above

33. Collecting personal information and effectively posing as another individual is known as the crime of

(a) Spooling

(b) Identity theft

(c) Spoofing

(d) Hacking

www.shikarat.com

34. ಭ್ರಾಂತಿ/ಮರೀಚಿಕೆ (ಮೈರೇಜ್)ಗೆ ಕಾರಣವೇನು ?
(a) ಬೆಳಕಿನ ವ್ಯತಿಕರಣ
(b) ಬೆಳಕಿನ ವಿವರ್ತನೆ
(c) ಬೆಳಕಿನ ಧ್ರುವೀಕರಣ
(d) ಬೆಳಕಿನ ಸಮಗ್ರ ಆಂತರಿಕ ವಕ್ರೀಕರಣ

35. ರಾಸಾಯನಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುವ ಸಾಧನವನ್ನು ________ ಎಂದು ಕರೆಯುತ್ತಾರೆ.
(a) ಬ್ಯಾಟರಿ
(b) ಮೋಟಾರ್
(c) ಜನರೇಟರ್
(d) ಚಲಿಸುವ ಸುರುಳಿ ಮೀಟರ್

36. 2018 ರ ಜಕಾರ್ತ ಏಷ್ಯನ್ ಗೇಮ್ಸ್‌ನಲ್ಲಿ ಅಥ್ಲೆಟಿಕ್ಸ್‌ನ ಯಾವ ವಿಭಾಗದಲ್ಲಿ ತೇಜಿಂದರ್ ಪಾಲ್ ಸಿಂಗ್ ಭಾರತಕ್ಕೆ ಮೊದಲ ಚಿನ್ನದ ಪದಕ ತಂದುಕೊಟ್ಟರು ?
(a) ಜಾವೆಲಿನ್ ಎಸೆತ
(b) 400 ಮೀ. ಓಟ
(c) ಉದ್ದ ಜಿಗಿತ
(d) ಗುಂಡೆಸೆತ

37. ಕೇಂದ್ರ ವಾಣಿಜ್ಯ ಮತ್ತು ಉದ್ಯಮ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟ ಮೊಬೈಲ್ ಆ್ಯಪ್ ''ರಿ-ಯುನೈಟ್'' (ಮರಳಿ ಸೇರಿಸು) ನ ಉದ್ದೇಶ
(a) ಆನ್‌ಲೈನ್ ಶಾಪಿಂಗ್ ವೇಳೆ ಸಮಸ್ಯೆಗಳಿಲ್ಲದೆ ಹಣಪಾವತಿ
(b) ಆನ್‌ಲೈನ್ ವ್ಯವಹಾರ ನಿರ್ವಹಿಸಲು ಸಾಮಾನ್ಯ ವೇದಿಕೆ
(c) ಕಾಣೆಯಾದ ಮತ್ತು ಪರಿತ್ಯಕ್ತ ಮಕ್ಕಳ ಜಾಡುಹಿಡಿಯುವುದು
(d) ಗುರುತಿಸಲ್ಪಡದ ಶವಗಳನ್ನು ಗುರುತಿಸುವುದು

38. ಈ ಕೆಳಗಿನವುಗಳಲ್ಲಿ ಯಾವುದು ಪೋಲಿಸ್ (ಆರಕ್ಷಕ) ಸಿಬ್ಬಂದಿಗಾಗಿ ಗೃಹ ಸಚಿವಾಲಯ ಇತ್ತೀಚೆಗೆ ಸ್ಥಾಪಿಸಿದ ಪದಕವಲ್ಲ ?
(a) ಗೃಹಮಂತ್ರಿಗಳ ವಿಶಿಷ್ಟ ಕಾರ್ಯಾಚರಣಾ ಪದಕ
(b) ಆಂತರಿಕ ಸುರಕ್ಷಾ ಪದಕ
(c) ವಿಶಿಷ್ಟ ಸೇವಾ ಪದಕ
(d) ಉತ್ಕೃಷ್ಟ ಸೇವಾ ಪದಕ

34. The reason for a mirage is
(a) Interference of light
(b) Diffraction of light
(c) Polarization of light
(d) Total internal reflection of light

35. A device which converts chemical energy into electrical energy is called
(a) Battery
(b) Motor
(c) Generator
(d) Moving coil meter

36. Tejinder Pal Singh won India's First Gold Medal in Athletics at the 2018 Jakartha Asian Games in
(a) Javelin throw
(b) 400 mts run
(c) Long jump
(d) Shot-put

37. "Re-Unite" is a Mobile app launched by The Union Ministry of Commerce and Industry which helps in
(a) Hassle free payments during on-line shopping
(b) A common platform to conduct on-line business
(c) Trace missing and abandoned children
(d) Identify un-identified dead bodies

38. Which of the following is not a medal recently instituted by the Ministry of Home affairs for Police Personnel ?
(a) Home Ministers Special Operation Medal
(b) Antharik Suraksha Medal
(c) Vishisht Seva Medal
(d) Uthkrisht Seva Medal

www.shikarat.com

39. ಹೈನುಗಾರಿಕೆ ಕ್ಷೇತ್ರದಲ್ಲಿ ವಿಪರೀತ ದುರ್ಬಳಕೆಗಾಗಿ ಈ ಔಷಧಿಯ ಉತ್ಪಾದನೆ ಮತ್ತು ಮಾರಾಟವನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಇತ್ತೀಚೆಗೆ ನಿರ್ಬಂಧಿಸಿದೆ.
(a) ಸೆಫೆಲೊಸ್ಪೊರಿನ್
(b) ಆಕ್ಸಿಟೋಸಿನ್
(c) ಆಕ್ಸಿಟೆಟ್ರಾಸೈಕ್ಲೀನ್
(d) ಫ್ಯುರಾಝೊಲಿಡೋನ್

40. ಪಿನಾಕಾ – II ರ ವಿಷಯದಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿ ?
(a) ಇದು ಡಿಆರ್‌ಡಿಓದಿಂದ ಅಭಿವೃದ್ಧಿ ಪಡಿಸಲಾದ ಬಹುಬ್ಯಾರೆಲ್ ಗನ್ ಆಗಿದೆ
(b) ಇದು ಭಾರತೀಯ ಸೇನೆಗಾಗಿ ಅಭಿವೃದ್ಧಿ ಪಡಿಸಲಾದ ಪೂರ್ತಿಯಾಗಿ ಸ್ವಯಂಚಾಲಿತ ಮಷಿನ್‌ಗನ್ ಆಗಿದೆ
(c) ಬಹುಬ್ಯಾರೆಲ್ ರಾಕೆಟ್‌ಲಾಂಚರ್‌ನ ಮಾರ್ಗದರ್ಶನ ಹೊಂದಿದ ಆವೃತ್ತಿಯಾಗಿದೆ
(d) ಇದು ರಷ್ಯಾದ ಸಹಯೋಗದೊಂದಿಗೆ ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ಯುದ್ಧ ಟ್ಯಾಂಕ್ ಆಗಿದೆ

41. ಒಂದು ಸಬ್‌ಮೆರೀನ್‌ನಲ್ಲಿ ಸಮುದ್ರಮಟ್ಟದ ಮೇಲಿರುವ ವಸ್ತುಗಳನ್ನು ನೋಡಲು ಉಪಯೋಗಿಸುವ ಉಪಕರಣ ಯಾವುದು ?
(a) ಪೆರಿಸ್ಕೋಪ್
(b) ಪಾಲಿಗ್ರಾಫ್
(c) ಫೋಟೋಮೀಟರ್
(d) ಪೈರೋಮೀಟರ್

42. ಗುರುತ್ವದಿಂದ ಉಂಟಾದ ವೇಗೋತ್ಕರ್ಷವು ಯಾವುದರಿಂದ ಮುಕ್ತವಾಗಿರುತ್ತದೆ ?
(a) ವಸ್ತುವಿನ ಘನರಾಶಿ (ಮಾಸ್)
(b) ಗಾತ್ರ
(c) ಆಕಾರ
(d) ಮೇಲಿನ ಎಲ್ಲವೂ

43. ತುಕ್ಕು ಹಿಡಿಯುವುದರಿಂದ ಕಬ್ಬಿಣದ ತೂಕವು
(a) ಕಡಿಮೆಯಾಗುತ್ತದೆ
(b) ಹೆಚ್ಚಾಗುತ್ತದೆ
(c) ಸಮಾನವಾಗಿ ಉಳಿಯುತ್ತದೆ
(d) ನಿಖರವಾಗಿಲ್ಲ

39. The Union Ministry of Health and Family Welfare has recently banned the manufacture and sale of __________ drug for its rampant misuse in the dairy sector.
(a) Cephalosporin
(b) Oxytocin
(c) Oxytetracycline
(d) Furazolidone

40. Which of the following is true in respect of Pinaka-II ?
(a) It is a multi barrel gun developed by the DRDO
(b) It is a fully automatic machine gun developed for Indian Army
(c) It is a guided version of a multi barrel rocket launcher
(d) It is an indigenously developed battle tank in collaboration with Russia

41. Which instrument is used in a submarine to see objects above sea level ?
(a) Periscope
(b) Polygraph
(c) Photometer
(d) Pyrometer

42. Acceleration due to gravity(g) is independent of
(a) Mass of the body
(b) Size
(c) Shape
(d) All of the above

43. Due to rusting the weight of iron
(a) Decreases
(b) Increases
(c) Remains the same
(d) Uncertain

www.shikarat.com

44. ಲಾಫಿಂಗ್‌ಗ್ಯಾಸ್ (ನಗೆ ಅನಿಲ) ಯಾವುದು ?
(a) ಕಾರ್ಬನ್ ಡೈಆಕ್ಸೈಡ್
(b) ಸಲ್ಫರ್ ಡೈಆಕ್ಸೈಡ್
(c) ನೈಟ್ರೋಜನ್ ಡೈಆಕ್ಸೈಡ್
(d) ನೈಟ್ರಸ್ ಆಕ್ಸೈಡ್

45. ರೇಡಿಯಮ್‌ನ್ನು ಯಾವ ಖನಿಜದಿಂದ ಪಡೆಯಲಾಗುತ್ತದೆ ?
(a) ಸುಣ್ಣ ಶಿಲೆ (ಲೈಮ್‌ಸ್ಟೋನ್)
(b) ಹೆಮಟೈಟ್
(c) ಪಿಚ್‌ಬ್ಲೆಂಡ್
(d) ರುಟೈಲ್

46. ಲೋಕಸಭೆಯಲ್ಲಿ ಅಂಗೀಕರಿಸಲಾದ ಕ್ರಿಮಿನಲ್ ಕಾಯ್ದೆ (ತಿದ್ದುಪಡಿ ಮಸೂದೆ 2018) ಈ ವಿಷಯವಾಗಿ ಅವಕಾಶ ಕಲ್ಪಿಸಿದೆ.
(a) ಎಲ್ಲ ಸಾಮೂಹಿಕ ಅತ್ಯಾಚಾರ ಅಪರಾಧಿಗಳಿಗೆ ಮರಣದಂಡನೆ
(b) 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರ ಅತ್ಯಾಚಾರ ಅಪರಾಧಿಗಳಿಗೆ ಮರಣದಂಡನೆ
(c) 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರ ಅತ್ಯಾಚಾರ ಅಪರಾಧಿಗಳಿಗೆ ಮರಣದಂಡನೆ
(d) ಮೇಲಿನ ಯಾವುದೂ ಅಲ್ಲ

47. ಭಾರತೀಯ ಸೇನೆಗಾಗಿ 'ಮೇಕ್ ಇನ್ ಇಂಡಿಯಾ' ದ ಅಡಿಯಲ್ಲಿ ತಯಾರಿಸಲಾದ V-46-6 ಮತ್ತು V-92-S2 ಗಳು.
(a) ಪೂರ್ಣ ಪ್ರಮಾಣದ ಸ್ವಯಂಚಾಲಿತ ಮಷಿನ್‌ಗನ್‌ಗಳು
(b) ಅಧಿಕ ಶಕ್ತಿಯ ಬಹು ಇಂಧನ ಇಂಜಿನ್‌ಗಳು
(c) ಹೊಸ ಆವೃತ್ತಿಯ ಮಾರ್ಗನಿರ್ದೇಶಿತ ಮೇಲ್ಮೈಯಿಂದ ಮೇಲ್ಮೈ ಮಿಸೈಲ್‌ಗಳಿಗೆ
(d) ಹಗುರ ತೂಕದ ಬುಲೆಟ್‌ಪ್ರೂಫ್ ಜಾಕೆಟ್‌ಗಳು

48. ಹುಲಿ ಸಂರಕ್ಷಣೆ ಕುರಿತ ಜಾಗೃತಿ ಮೂಡಿಸಲು ಅಂತರರಾಷ್ಟ್ರೀಯ ಹುಲಿ ದಿನವನ್ನು ಯಾವ ದಿನ ಆಚರಿಸಲಾಗುತ್ತದೆ ?
(a) ಜೂನ್ 21
(b) ಜುಲೈ 29
(c) ಮಾರ್ಚ್ 1
(d) ಡಿಸೆಂಬರ್ 1

44. What is laughing gas ?
(a) Carbon dioxide
(b) Sulphur dioxide
(c) Nitrogen dioxide
(d) Nitrous oxide

45. From which mineral is radium obtained ?
(a) Limestone
(b) Hematite
(c) Pitchblende
(d) Rutile

46. The Criminal Law (Amendment Bill 2018) was passed by the Lok Sabha which provides for
(a) Death Penalty for all gang rape convicts
(b) Death Penalty for those convicted of raping girls below 12 yrs.
(c) Death Penalty for those convicted of raping girls below 18 yrs.
(d) None of the above

47. V-46-6 and V-92-S2 are __________ equipment manufactured under make in India for the Indian Army.
(a) Fully automatic machine guns
(b) High powered multi fuel engines
(c) New version of guided surface to surface missiles
(d) Light weight bullet proof jackets

48. International Tiger Day to raise awareness on Tiger Conservation is observed on
(a) 21st June
(b) 29th July
(c) 1st March
(d) 1st December

www.shikarat.com

49. ಭಾರತ ಅಭಿವೃದ್ಧಿಗೊಳಿಸಿದ ಮೊಟ್ಟ ಮೊದಲ ಪರಿಸರ ಸ್ನೇಹಿ ಜೈವಿಕ ಇಂಧನ ಚಾಲಿತ ವಿಮಾನ ಇತ್ತೀಚೆಗೆ ಡೆಹ್ರಾಡೂನ್‌ನಿಂದ ದೆಹಲಿಗೆ ಪ್ರಯಾಣಿಸಿತು. ಜೈವಿಕ ಇಂಧನವಾಗಿ ಉಪಯೋಗಿಸಿದ್ದು ಯಾವುದರ ತೈಲ ಮಿಶ್ರಣ ?

(a) ಜಟ್ರೊಫಾ ಬೀಜಗಳು

(b) ಸಾಸಿವೆ ಬೀಜಗಳು

(c) ಬಿಳಿ ಸಾಸಿವೆ (ರ್‍ಯಾಪ್ಸೀಡ್)

(d) ತಾಳೆ ಎಣ್ಣೆ

50. ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರಾಗಿ ಇತ್ತೀಚೆಗೆ ನೇಮಕಗೊಂಡ ಗಣ್ಯ ಕ್ಷಿಪಣಿ ವಿಜ್ಞಾನಿ

(a) ಶ್ರೀ ಕೆ. ಭರತ್ ರೆಡ್ಡಿ

(b) ಶ್ರೀ ಎಸ್. ಕ್ರಿಸ್ಟೋಫರ್

(c) ಶ್ರೀ ಜಿ. ಸತೀಶ್ ರೆಡ್ಡಿ

(d) ಶ್ರೀ ವಿ. ಕೆ. ಸಾರಸ್ವತ್

51. ಈ ಕೆಳಗಿನ ಯಾವ ಪರಿಸ್ಥಿತಿಗಳಲ್ಲಿ ರಾಸಾಯನಿಕ ಕ್ರಿಯೆಯು ಸಂಭವಿಸುವುದಿಲ್ಲ ?

(a) ಸಾಮಾನ್ಯ ಲವಣವು ಗಾಳಿಗೆ ಅನಾವರಿಸಲ್ಪಟ್ಟಾಗ

(b) ಗಾಳಿಯಲ್ಲಿ ಕಲ್ಲಿದ್ದಲನ್ನು ಸುಡುವಾಗ

(c) ಸೋಡಿಯಮ್‌ನ್ನು ನೀರಿನಲ್ಲಿ ಇರಿಸಿದಾಗ

(d) ಕಬ್ಬಿಣವನ್ನು ತೇವಾಂಶವಿರುವ ಗಾಳಿಯಲ್ಲಿ ಇರಿಸಿದಾಗ

**ನಿರ್ದೇಶನ (52-54)** : ಕೆಳಗೆ ನೀಡಲ್ಪಟ್ಟ ಮಾಹಿತಿಯನ್ನು ಸರಿಯಾಗಿ ಓದಿಕೊಂಡು ಕೇಳಲ್ಪಟ್ಟ ಪ್ರಶ್ನೆಗಳನ್ನು ಉತ್ತರಿಸಿ :

D ಬಿಂದು A ಬಿಂದುವಿನ ಪಶ್ಚಿಮ ದಿಕ್ಕಿನಲ್ಲಿ 14 ಮೀಟರ್ ದೂರದಲ್ಲಿದೆ. B ಬಿಂದು D ಬಿಂದುವಿನ ದಕ್ಷಿಣದಲ್ಲಿ 4ಮೀಟರ್ ದೂರದಲ್ಲಿದೆ. F ಬಿಂದು D ಬಿಂದುವಿನ ದಕ್ಷಿಣದಲ್ಲಿ 9 ಮೀಟರ್ ದೂರದಲ್ಲಿದೆ. E ಬಿಂದು B ಬಿಂದುವಿನ ಪೂರ್ವಕ್ಕೆ 7 ಮೀಟರ್ ದೂರದಲ್ಲಿದೆ. C ಬಿಂದು E ಬಿಂದುವಿನ ಉತ್ತರದಲ್ಲಿ 4 ಮೀಟರ್ ದೂರದಲ್ಲಿದೆ. G ಬಿಂದು A ಬಿಂದುವಿನ ದಕ್ಷಿಣದಲ್ಲಿ 4 ಮೀಟರ್ ದೂರದಲ್ಲಿದೆ.


52. ಈ ಕೆಳಗಿನವುಗಳಲ್ಲಿ ಯಾವ ಬಿಂದುಗಳು ನೇರ ರೇಖೆಯಲ್ಲಿದೆ ?

(a) D, E, A

(b) E, G, C

(c) D, B, G

(d) E, G, B



49. India developed the first ever environment friendly bio fuel powered flight that recently flew from Dehradun to Delhi. The bio fuel used was a blend of oil from

(a) Jathropa seeds

(b) Mustard seeds

(c) Rapeseed

(d) Palm oil

50. The distinguished missile scientist who was recently appointed scientific advisor to Raksha Mantri is

(a) Sri K. Bharath Reddy

(b) Sri S. Christopher

(c) Sri G. Sathish Reddy

(d) Sri V. K. Saraswat

51. In which one of the following situations a chemical reaction does not occur ?

(a) Common salt is exposed to air

(b) Coal is burnt in air

(c) Sodium is placed in water

(d) Iron is kept in moist air

**Directions (52-54) :** Study the following information carefully to answer the given questions :

Point D is 14 m towards the West of Point A. Point B is 4 m towards the South of point D. Point F is 9 m towards the South of Point D. Point E is 7 m towards the East of point B. Point C is 4 m towards the North of point E. Point G is 4 m towards the South of point A.

52. Which of the following points are in a straight line ?

(a) D, E, A

(b) E, G, C

(c) D, B, G

(d) E, G, B

www.shikarat.com

53. C ಬಿಂದುವಿಗೆ ಸಂಬಂಧಪಟ್ಟಂತೆ A ಬಿಂದು ಯಾವ ದಿಕ್ಕಿನಲ್ಲಿದೆ ?
(a) ಪೂರ್ವ
(b) ಪಶ್ಚಿಮ
(c) ಉತ್ತರ
(d) ದಕ್ಷಿಣ

53. In which direction is A with respect to C ?
(a) East
(b) West
(c) North
(d) South

54. F ಬಿಂದುವಿನ ಕಡೆಗೆ ಉತ್ತರ ದಿಕ್ಕಿನಲ್ಲಿ ಒಬ್ಬ ವ್ಯಕ್ತಿಯು 5 ಮೀಟರ್ ಚಲಿಸಿ ಬಲಕ್ಕೆ ತಿರುಗುತ್ತಾನೆ, ಈ ಕೆಳಗಿನವುಗಳಲ್ಲಿ ಯಾವ ಬಿಂದುವನ್ನು ಅವನು ಮೊದಲಿಗೆ ತಲುಪುತ್ತಾನೆ ?
(a) G
(b) D
(c) E
(d) A

54. A person walks 5 m towards North from point F and then takes a right turn, which of the following points would he reach first ?
(a) G
(b) D
(c) E
(d) A

55. ಗೀತಾಳ ಸ್ಕೂಟರ್‌ನಲ್ಲಿ ಟ್ಯಾಂಕ್ ಭರ್ತಿಯಿರುವ ಪೆಟ್ರೋಲ್ 10 ದಿನಗಳಿಗೆ ಸಾಕಾಗುತ್ತದೆ. ಅವಳು ಪ್ರತಿ ದಿನ 25% ನಷ್ಟು ಹೆಚ್ಚು ಉಪಯೋಗಿಸಲಾರಂಭಿಸಿದರೆ ಟ್ಯಾಂಕ್ ಪೂರ್ತಿಯಿರುವ ಪೆಟ್ರೋಲ್ ಎಷ್ಟು ದಿನಗಳಿಗೆ ಸಾಕಾಗುತ್ತದೆ ?
(a) 5
(b) 6
(c) 7
(d) 8

55. Tank full petrol in Geetha's scooter lasts 10 days. If she starts using 25% more every day, how many days will be tank full petrol lasts ?
(a) 5
(b) 6
(c) 7
(d) 8

56. ಭಾರತದ ಸಂವಿಧಾನ ಸರ್ವೋಚ್ಚ ನ್ಯಾಯಾಲಯಕ್ಕೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ವಿವಾದಗಳನ್ನು ಈ ಮೂಲಕ ಬಗೆಹರಿಸಲು ಅಧಿಕಾರ ಕೊಟ್ಟಿದೆ.
(a) ಮೇಲ್ಮನವಿಯ ನ್ಯಾಯವ್ಯಾಪ್ತಿ
(b) ಮೂಲ ನ್ಯಾಯಾಧಿಕಾರ
(c) ಸಲಹಾ ನ್ಯಾಯಾಧಿಕಾರ
(d) ರಿಟ್ ನ್ಯಾಯಾಧಿಕಾರ

56. The Constitution of India empowers the Supreme Court of India to adjudicate disputes between Centre and the States through
(a) Appellate jurisdiction
(b) Original jurisdiction
(c) Advisory jurisdiction
(d) Writ jurisdiction

57. ಗಡಿ ನಿರ್ವಹಣಾ ಇಲಾಖೆಯು ಯಾವ ಕೇಂದ್ರ ಸಚಿವಾಲಯದಡಿ ಬರುತ್ತದೆ ?
(a) ರಕ್ಷಣಾ ಸಚಿವಾಲಯ
(b) ಗೃಹ ಸಚಿವಾಲಯ
(c) ವಿದೇಶಾಂಗ ವ್ಯವಹಾರಗಳ ಸಚಿವಾಲಯ
(d) ವಾಣಿಜ್ಯ ಸಚಿವಾಲಯ

57. Department of Border management is a department under which of the following Union Ministries ?
(a) Ministry of Defence
(b) Ministry of Home affairs
(c) Ministry of External affairs
(d) Ministry of Commerce



www.shikarat.com

58. ಇವುಗಳಲ್ಲಿ ಯಾವ/ಯಾರ ಚುನಾವಣೆಗೆ ಭಾರತದ ಚುನಾವಣಾ ಆಯೋಗ ಸಂಬಂಧಪಟ್ಟಿಲ್ಲ ?

(a) ಸಂಸತ್ತು

(b) ಉಪರಾಷ್ಟ್ರಪತಿ

(c) ರಾಜ್ಯ ಶಾಸಕಾಂಗ

(d) ಪಂಚಾಯತ್‌ಗಳು ಮತ್ತು ನಗರಸಭೆಗಳು

59. ಈ ರಿಟ್‌ಗಳಲ್ಲಿ ಯಾವುದು ಅಕ್ಷರಶಃ ''ನಾವು ಆದೇಶಿಸುತ್ತೇವೆ'' ಎಂದು ಅರ್ಥ ಕೊಡುತ್ತದೆ ?

(a) ಬಂಧೀ ಪ್ರತ್ಯಕ್ಷೀಕರಣ

(b) ಪರಮಾದೇಶ

(c) ಕೋ-ವಾರಂಟ್

(d) ಸರ್ಟಿಯೊರರಿ

**ನಿರ್ದೇಶನ (60-61)** : ಇಲ್ಲಿ ನೀಡಲ್ಪಟ್ಟ 3 ಅಕ್ಷರಗಳ 5 ಪದಗಳನ್ನು ಕೆಳಗಿನ ಪ್ರಶ್ನೆಗಳು ಆಧರಿಸಿರುತ್ತವೆ :

TUB HUB MUG PAR FOR

60. ಮೇಲಿನ ಎಲ್ಲಾ ಪದಗಳ ಮೊದಲ ಮತ್ತು ಎರಡನೆಯ ಅಕ್ಷರಗಳನ್ನು ಪರಸ್ಪರ ಅದಲುಬದಲು ಮಾಡುವುದರಿಂದ, ಇಂಗ್ಲೀಷ್ ಭಾಷೆಯ ಎಷ್ಟು ಅರ್ಥಬದ್ಧವಾದ ಪದಗಳನ್ನು ರಚಿಸಬಹುದು ?

(a) ಯಾವುದೂ ಸಾಧ್ಯವಿಲ್ಲ

(b) ಮೂರು

(c) ಒಂದು

(d) ಎರಡು

61. ಮೇಲಿನ ಎಲ್ಲಾ ಪದಗಳ ಅಕ್ಷರಗಳನ್ನು ಅಕ್ಷರಾದಿ ಕ್ರಮದಲ್ಲಿ (ಆಯಾ ಪದಗಳೊಳಗೆ) ಜೋಡಿಸಿದರೆ, ಎಷ್ಟು ಪದಗಳು ಬದಲಾಗದೇ ಉಳಿಯುತ್ತದೆ ?

(a) ಎರಡು

(b) ಮೂರು

(c) ಒಂದು

(d) ಯಾವುದೂ ಉಳಿಯುವುದಿಲ್ಲ

62. 1857 ರಲ್ಲಿ ಪ್ರಥಮ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾರತದ ಗವರ್ನರ್ ಜನರಲ್ ಯಾರಾಗಿದ್ದರು ?

(a) ಲಾರ್ಡ್ ಡಾಲ್‌ಹೌಸೀ

(b) ಲಾರ್ಡ್ ಕ್ಯಾನಿಂಗ್

(c) ಲಾರ್ಡ್ ಹಾರ್ಡಿಂಗ್

(d) ಲಾರ್ಡ್ ಲಿಟ್ಟನ್

58. The Election Commission of India is not concerned with Elections of/to

(a) Parliament

(b) Vice President

(c) State Legislature

(d) Panchayats and Municipalities

59. Which of the following writs literally means "We Command" ?

(a) Habeas Corpus

(b) Mandamus

(c) Quo-Warranto

(d) Certiorari

**Directions (60-61) :** The following questions are based on the five, three letter words given below :

TUB HUB MUG PAR FOR

60. If the positions of the first and second letters of all the words are interchanged, how many words will form meaningful English words ?

(a) None

(b) Three

(c) One

(d) Two

61. If all the letters in each of the words are arranged alphabetically (within the word), how many words will remain unchanged ?

(a) Two

(b) Three

(c) One

(d) None

62. Who was the Governor General of India during the First War of independence 1857 ?

(a) Lord Dalhousie

(b) Lord Canning

(c) Lord Hardinge

(d) Lord Lytton

www.shikarat.com

63. ಸಂಗಮ್ ಸಾಹಿತ್ಯವು ____________ ಆಗಿದೆ.
(a) ಗುಪ್ತ ಸಾಮ್ರಾಜ್ಯದವರು ಪ್ರೋತ್ಸಾಹಿಸಿದ ಶಾಸ್ತ್ರೀಯ ಸಂಸ್ಕೃತ ಸಾಹಿತ್ಯ
(b) ಬೌದ್ಧ ಸಂಘಗಳ ಇತಿಹಾಸಕ್ಕೆ ಸಂಬಂಧಪಟ್ಟ ಪಾಲಿ ಸಾಹಿತ್ಯ
(c) ದಕ್ಷಿಣ ಭಾರತದ ಪ್ರಾಚೀನ ಇತಿಹಾಸದ ಗುಣಲಕ್ಷಣಗಳನ್ನು ಹೇಳುವ ಮುಂಚಿನ ತಮಿಳು ಸಾಹಿತ್ಯ
(d) ಪ್ರಯಾಗದಲ್ಲಿನ ನದಿಗಳ ಸಂಗಮದ ಪ್ರದೇಶದ ಪವಿತ್ರತೆಗೆ ಸಂಬಂಧಿಸಿದ ಪೌರಾಣಿಕ ಸ್ವರೂಪವುಳ್ಳ ಸಂಸ್ಕೃತ ಕೃತಿಗಳು

64. ಬರ್ದೋಲಿ ಸತ್ಯಾಗ್ರಹದ (1928) ನಾಯಕ ಯಾರಾಗಿದ್ದರು ?
(a) ವಲ್ಲಭಭಾಯಿ ಪಟೇಲ್
(b) ಮಹಾತ್ಮಗಾಂಧಿ
(c) ವಿಟ್ಠಲಭಾಯಿ ಪಟೇಲ್
(d) ಮಹದೇವ್ ದೇಸಾಯಿ

65. ಅಜಂತಾ ಗುಹೆಗಳು ಎಲ್ಲಿವೆ ?
(a) ಗುಜರಾತ್
(b) ಮಹಾರಾಷ್ಟ್ರ
(c) ಕರ್ನಾಟಕ
(d) ಒಡಿಶಾ

66. 'ವಿಟಾಮಿನ್ ಡಿ' ಕೊರತೆ ಇದರ ಹೀರಿಕೊಳ್ಳುವಿಕೆಯ ಕೊರತೆಗೆ ದಾರಿ ಮಾಡಿಕೊಡುತ್ತದೆ.
(a) ಅಯೋಡಿನ್
(b) ಫಾಸ್ಫರಸ್
(c) ಕ್ಯಾಲ್ಸಿಯಂ
(d) ಕಬ್ಬಿಣಾಂಶ (Iron)

67. ಒಬ್ಬ ವ್ಯಕ್ತಿ 50 ಕಿ.ಮೀ. ದೂರವನ್ನು 8 ಗಂಟೆಗಳಲ್ಲಿ ಕ್ರಮಿಸುತ್ತಾನೆ. ಅವನು 4 ಕಿ.ಮೀ./ಗಂಟೆಯಂತೆ ನಡೆದುಕೊಂಡು ಒಂದಿಷ್ಟು ದೂರ ಹೋಗುತ್ತಾನೆ ಮತ್ತು 10 ಕಿ.ಮೀ./ಗಂಟೆಯಂತೆ ಉಳಿದ ದೂರವನ್ನು ಬೈಸಿಕಲ್‌ನಲ್ಲಿ ಕ್ರಮಿಸುತ್ತಾನೆ. ಅವನು ನಡೆದುಕೊಂಡು ಸಾಗಿದ ದೂರವೆಷ್ಟು?
(a) 10 ಕಿ.ಮೀ.
(b) 20 ಕಿ.ಮೀ.
(c) 30 ಕಿ.ಮೀ.
(d) 40 ಕಿ.ಮೀ.

63. Sangam literature is
(a) Classical Sanskrit literature patronised by the Guptas
(b) Pali literature dealing with the history of the Buddhist Sanghas
(c) Early Tamil literature attributed to the history of ancient Southern India
(d) Sanskrit works of Puranic nature dealing with the sanctity of the place where there is the confluence of rivers in Prayaga

64. The leader of the Bardoli Satyagraha (1928) was
(a) Vallabhbhai Patel
(b) Mahatma Gandhi
(c) Vithalbhai Patel
(d) Mahadev Desai

65. The Ajanta caves are situated in
(a) Gujarat
(b) Maharashtra
(c) Karnataka
(d) Odisha

66. Deficiency of "Vitamin D" leads to lack of absorption of
(a) Iodine
(b) Phosphorus
(c) Calcium
(d) Iron

67. A person travelled a distance of 50 Km in 8 Hrs, he covered a part of a distance on foot at 4 Km/hr. and part on bicycle at 10 Km/hr. How much distance did he travel on foot ?
(a) 10 Km
(b) 20 Km
(c) 30 Km
(d) 40 Km

www.shikarat.com

68. ಸಭೆಯೊಂದರಲ್ಲಿ ಗ್ರಾಮದ ನಕ್ಷೆಯನ್ನು ಆಗ್ನೇಯ ದಿಕ್ಕು ಉತ್ತರವಾಗುವಂತೆ ಮತ್ತು ಈಶಾನ್ಯವು ಪಶ್ಚಿಮ ದಿಕ್ಕಾಗುವಂತೆ ಇರಿಸಲಾಗಿದೆ. ಹಾಗಾದರೆ ದಕ್ಷಿಣ ಯಾವ ದಿಕ್ಕಾಗುತ್ತದೆ ?

(a) ಉತ್ತರ

(b) ಈಶಾನ್ಯ

(c) ವಾಯುವ್ಯ

(d) ಪಶ್ಚಿಮ

69. ಎರಡು ಮೇಕೆಗಳನ್ನು ಒಂದೇ ಬೆಲೆಯಲ್ಲಿ ಮಾರಿದಾಗ ಕಿರಣ್ ಒಂದು ಮೇಕೆಗೆ 10% ಲಾಭ ಪಡೆದರೆ ಇನ್ನೊಂದರ ಮೇಲೆ 10% ನಷ್ಟ ಅನುಭವಿಸುತ್ತಾನೆ ಆಗ

(a) ಅವನಿಗೆ ಲಾಭವೂ ಇಲ್ಲ ಮತ್ತು ನಷ್ಟವೂ ಇಲ್ಲ

(b) ಅವನು 1% ಲಾಭ ಪಡೆಯುತ್ತಾನೆ

(c) ಅವನು 1% ನಷ್ಟ ಅನುಭವಿಸುತ್ತಾನೆ

(d) ಅವನು 2% ನಷ್ಟ ಅನುಭವಿಸುತ್ತಾನೆ

70. ರಮ್ಯ ರಶ್ಮಿಗಿಂತ ಅಂದವಾಗಿದ್ದಾಳೆ. ಆದರೆ ರೇಖಾಳಷ್ಟು ಅಂದವಾಗಿಲ್ಲ, ಹಾಗಾದರೆ

(a) ರಶ್ಮಿ ರಮ್ಯಳಷ್ಟು ಅಂದವಾಗಿಲ್ಲ

(b) ರಶ್ಮಿ ರೇಖಾಳಿಗಿಂತ ಅಂದವಾಗಿದ್ದಾಳೆ

(c) ರೇಖಾ ರಮ್ಯಳಷ್ಟು ಅಂದವಾಗಿಲ್ಲ

(d) ರಮ್ಯ ರೇಖಾಳಿಗಿಂತ ಅಂದವಾಗಿದ್ದಾಳೆ

71. ಅರ್ಥಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ಪಡೆದ ಭಾರತೀಯ ಯಾರು ?

(a) ಡಿ. ಸುಬ್ಬರಾವ್

(b) ಸಿ. ವಿ. ರಾಮನ್

(c) ರಘುರಾಮ್ ರಾಜನ್

(d) ಅಮಾರ್ತ್ಯ ಸೇನ್

72. ಈ ಕೆಳಗಿನ ಸಂಸ್ಥೆಗಳಲ್ಲಿ ಭಾರತದಲ್ಲಿ ಬಂಡವಾಳ ಮಾರುಕಟ್ಟೆ ನಿಯಂತ್ರಕ (ಕ್ಯಾಪಿಟಲ್ ಮಾರ್ಕೆಟ್ ರೆಗ್ಯುಲೇಟರ್ ಇನ್ ಇಂಡಿಯಾ) ಎಂದು ಯಾವುದನ್ನು ಕರೆಯುತ್ತಾರೆ ?

(a) IBA

(b) SEBI

(c) RBI

(d) NSDL

68. In a meeting a map of a village was placed in such manner that South-East becomes North and North-East becomes West. What will South become ?

(a) North

(b) North-East

(c) North-West

(d) West

69. If Kiran, while selling two goats at the same price makes a profit of 10% on one goat and suffers a loss of 10% on the other

(a) He makes no profit and no loss

(b) He makes a profit of 1%

(c) He suffers a loss of 1%

(d) He suffers a loss of 2%

70. Ramya is prettier than Rashmi but not as pretty as Rekha, then

(a) Rashmi is not as pretty as Ramya

(b) Rashmi is prettier than Rekha

(c) Rekha is not as pretty as Ramya

(d) Ramya is prettier than Rekha

71. Which Indian got a Nobel Prize for Economics ?

(a) D. Subbarao

(b) C. V. Raman

(c) Raghu Ram Rajan

(d) Amartya Sen

72. Which of the following organizations is known as Capital Market Regulator in India ?

(a) IBA

(b) SEBI

(c) RBI

(d) NSDL

www.shikarat.com

73. ಯಾವ ದೇಶವು G-20 ಸಮೂಹದ ಸದಸ್ಯವಾಗಿಲ್ಲ?

(a) ಭಾರತ

(b) ಇಂಡೋನೇಶಿಯಾ

(c) ಥೈಲ್ಯಾಂಡ್

(d) ಸೌದಿ ಅರೇಬಿಯಾ

73. Which country is not a member of the G-20 Group ?

(a) India

(b) Indonesia

(c) Thailand

(d) Saudi Arabia

74. ASEAN ನಲ್ಲಿನ ಒಟ್ಟು ಸದಸ್ಯರ ಸಂಖ್ಯೆ ಎಷ್ಟು?

(a) 12

(b) 10

(c) 8

(d) 15

74. Total number of members in ASEAN are

(a) 12

(b) 10

(c) 8

(d) 15

75. ಈ ಕೆಳಗಿನವುಗಳಲ್ಲಿ ಯಾವುದು ಅರ್ಥಶಾಸ್ತ್ರದ ಆರ್ಥಿಕ ಚಟುವಟಿಕೆ ಆಗಿರುವುದಿಲ್ಲ?

(a) ಒಬ್ಬ ಶಿಕ್ಷಕನು ತನ್ನ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು

(b) ಒಂದು ಕೋಚಿಂಗ್ ಸಂಸ್ಥೆಯಲ್ಲಿ ಶಿಕ್ಷಕನು ವಿದ್ಯಾರ್ಥಿಗಳಿಗೆ ಪಾಠ ಹೇಳುವುದು

(c) ಒಬ್ಬ ಶಿಕ್ಷಕನು ತನ್ನ ಮನೆಯಲ್ಲಿ ತನ್ನ ಮಗಳಿಗೆ ಪಾಠ ಹೇಳುವುದು

(d) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಒಬ್ಬ ಶಿಕ್ಷಕನು ವಿದ್ಯಾರ್ಥಿಗಳಿಗೆ ಪಾಠ ಹೇಳುವುದು

75. Which of the following would not Constitute an economic activity in Economics ?

(a) A teacher teaching students in his college

(b) A teacher teaching students in a coaching institute

(c) A teacher teaching his own daughter at home

(d) A teacher teaching students under Sarva Shiksha Abhiyan Scheme

76. ಕೆಳಗಿನವುಗಳಲ್ಲಿ ಯಾವ ಎರಡು ಜಿಲ್ಲೆಗಳ ಜೊತೆ ಕರ್ನಾಟಕದಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳ ಸರಿಯಾದ ನೆಲೆಯನ್ನು ತೋರಿಸುತ್ತದೆ?

(a) ರಾಯಚೂರು ಮತ್ತು ಉಡುಪಿ

(b) ಉಡುಪಿ ಮತ್ತು ಮಂಡ್ಯ

(c) ಉಡುಪಿ ಮತ್ತು ಶಿವಮೊಗ್ಗ

(d) ರಾಯಚೂರು ಮತ್ತು ಶಿವಮೊಗ್ಗ

76. Which of the following pair of districts show correct location of Thermal Power Plants in Karnataka ?

(a) Raichur and Udupi

(b) Udupi and Mandya

(c) Udupi and Shivamogga

(d) Raichur and Shivamogga

77. ಇಳಕಲ್ ಸೀರೆಗಳಿಗಾಗಿ ಪ್ರಸಿದ್ಧಿ ಪಡೆದ ಇಳಕಲ್ ಪಟ್ಟಣವಿರುವ ಜಿಲ್ಲೆ

(a) ಬಿಜಾಪುರ

(b) ಬಾಗಲಕೋಟೆ

(c) ಗದಗ

(d) ದಾವಣಗೆರೆ

77. Ilkal Town famous for Ilkal Sarees is located in

(a) Bijapur

(b) Bagalkot

(c) Gadag

(d) Davanagere

www.shikarat.com

78. ವಿದ್ಯುತ್ ಬಲ್ಬ್‌ನ ತಂತು (ಫಿಲಮೆಂಟ್) ಇದರಿಂದ ತಯಾರಿಸಲ್ಪಡುತ್ತದೆ.
(a) ಮ್ಯಾಗ್ನೇಶಿಯಂ
(b) ತಾಮ್ರ
(c) ಸೀಸ
(d) ಟಂಗ್‌ಸ್ಟನ್

79. ಇವುಗಳಲ್ಲಿ ಯಾವುದು ಬಿಟಿ ಹತ್ತಿಯನ್ನು ಅತ್ಯುತ್ತಮವಾಗಿ ವಿವರಿಸುತ್ತದೆ ?
(a) ಕೀಟನಾಶಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವ ಅಗತ್ಯವಿದೆ
(b) ಭಾರತದಲ್ಲಿ 2002ರಿಂದ ನಿಷೇಧಿಸಲ್ಪಟ್ಟಿದೆ
(c) ಕೀಟನಾಶಕ ಉತ್ಪಾದಿಸಲು ತಳೀಯವಾಗಿ ಬದಲಾಯಿಸಲಾಗಿದೆ
(d) ವೈರಸ್ ತಳಿಗಳನ್ನು ಉಪಯೋಗಿಸಿ ತಳಿ ಬದಲಾವಣೆ ಮಾಡಲಾಗಿದೆ

80. ಸಂದುಗಳಲ್ಲಿ – ಶೇಖರಣೆಗೊಳ್ಳುವುದರಿಂದ ಗೌಟ್ (ಸಂಧಿವಾತ) ಖಾಯಿಲೆ ಬರುತ್ತದೆ.
(a) ಲ್ಯಾಕ್ಟಿಕ್ ಆ್ಯಸಿಡ್
(b) ಆಕ್ಸಾಲಿಕ್ ಆಮ್ಲ
(c) ಅಸೆಟಿಕ್ ಆಮ್ಲ
(d) ಯೂರಿಕ್ ಆಮ್ಲ

81. 1946 ರಲ್ಲಿ ಭಾರತಕ್ಕೆ ಆಗಮಿಸಿದ ಕ್ಯಾಬಿನೆಟ್ ಮಿಶನ್ ಯಾರ ಮುಂದಾಳತ್ವದಲ್ಲಿತ್ತು ?
(a) ಲಾರ್ಡ್ ಪೆಥಿಕ್ ಲಾರೆನ್ಸ್
(b) ಸರ್ ಸ್ಟಾಫರ್ಡ್ ಕ್ರಿಪ್ಸ್
(c) ಎ. ವಿ. ಅಲೆಕ್ಸಾಂಡರ್
(d) ಲಾರ್ಡ್ ಎಟ್ಲೀ

82. ಗ್ರಾಂಡ್ ಟ್ರಂಕ್ ರಸ್ತೆಯನ್ನು ಯಾವ ಅಧಿಕಾರಿಯ ಆಳ್ವಿಕೆಯಲ್ಲಿ ನಿರ್ಮಿಸಲ್ಪಟ್ಟಿತ್ತು ?
(a) ಶೇರ್‌ಶಾಹ್ ಸೂರಿ
(b) ಬಾಬರ್
(c) ಶಾಹ್ ಜಹಾನ್
(d) ಅಕ್ಬರ್

78. Electric Bulb Filament is made from
(a) Magnesium
(b) Copper
(c) Lead
(d) Tungsten

79. Which of the following best describes Bt Cotton ?
(a) Requires large amounts of insecticides to be used
(b) It is banned in India since 2002
(c) It is genetically modified to produce an insecticide
(d) Genetic modification is done using strains of a virus

80. "Gout" is the disease caused by deposition of __________ in the joints.
(a) Lactic Acid
(b) Oxalic Acid
(c) Acetic Acid
(d) Uric Acid

81. The Cabinet Mission which arrived at Delhi in 1946 was headed by ?
(a) Lord Pethick Lawrence
(b) Sir Stafford Cripps
(c) A. V. Alexander
(d) Lord Attlee

82. The Grand Trunk Road was built during the reign of which ruler ?
(a) Shershah Suri
(b) Babar
(c) Shah Jahan
(d) Akbar

www.shikarat.com

83. ಮರಾಠಾ ಸಾಮ್ರಾಜ್ಯದಲ್ಲಿ ಮಂತ್ರಿ ಮಂಡಲದಲ್ಲಿ ಪ್ರಧಾನಮಂತ್ರಿಯನ್ನು ಏನೆಂದು ಕರೆಯುತ್ತಿದ್ದರು ?

(a) ಪೇಶ್ವಾ
(b) ಸಚಿವ
(c) ಮಂತ್ರಿ
(d) ಸಮಂತ

84. ನಾಣ್ಯಪದ್ಧತಿಯ ಅಪಮೌಲ್ಯೀಕರಣ ಎಂದರೆ

(a) ಅಂತರರಾಷ್ಟ್ರೀಯ ನಾಣ್ಯಪದ್ಧತಿಗಳ ಬೃಹತ್ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಾಣ್ಯದ ಬೆಲೆಯಲ್ಲಿ ಇಳಿಕೆ
(b) ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಾಣ್ಯಕ್ಕೆ ತನ್ನ ಮೌಲ್ಯವನ್ನು ಪಡೆದುಕೊಳ್ಳಲು ಅನುಮತಿ ನೀಡುವುದು
(c) ಪೂರ್ವ ನಿರ್ಧಾರಿತ ನಾಣ್ಯಗಳ ಬುಟ್ಟಿಯ ಬೆಲೆಯೊಂದಿಗೆ ನಾಣ್ಯದ ಮೌಲ್ಯವನ್ನು ಸಂಯೋಜಿಸುವುದು
(d) ಐ. ಎಮ್. ಎಫ್., ವರ್ಲ್ಡ್ ಬ್ಯಾಂಕ್ ಮತ್ತು ವ್ಯಾಪಾರದ ಬೃಹತ್ ಪಾಲುದಾರರೊಂದಿಗೆ ಹಲವು ದಿಕ್ಕಿನ ಸಮಾಲೋಚನೆಯಿಂದ ನಾಣ್ಯದ ಮೌಲ್ಯವನ್ನು ನಿಗದಿಸುವುದು

85. ಭಾರತದಲ್ಲಿ ಕೇಂದ್ರ ಬ್ಯಾಂಕಿಂಗ್ ಕಾರ್ಯಗಳನ್ನು ನಿರ್ವಹಿಸುವ ಬ್ಯಾಂಕ್ ಯಾವುದು ?

I. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
II. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ
III. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
IV. ಪಂಜಾಬ್ ನ್ಯಾಶನಲ್ ಬ್ಯಾಂಕ್

(a) I, II
(b) II
(c) I
(d) II, III

86. ಕರ್ನಾಟಕದ ಮೊದಲ ಜಲವಿದ್ಯುತ್ ಸ್ಥಾವರ ಯಾವ ನದಿಗೆ ಅಡ್ಡವಾಗಿ ನಿರ್ಮಿಸಲಾಗಿದೆ ?

(a) ಶಿವನ ಸಮುದ್ರದ ಬಳಿ ಕಾವೇರಿ
(b) ಕೃಷ್ಣ ರಾಜಸಾಗರದ ಬಳಿ ಕಾವೇರಿ
(c) ಗೇರುಸೊಪ್ಪೆ ಬಳಿ ಶರಾವತಿ
(d) ಹೊಸಪೇಟೆಯ ಹತ್ತಿರ ತುಂಗಾಭದ್ರಾ

83. The prime Minister in the Council of Ministers, in the Maratha Empire was called ?

(a) Peshwa
(b) Sachiv
(c) Mantri
(d) Samanta

84. Devaluation of a currency means

(a) Reduction in the value of a currency vis-a-vis major internationally traded currencies
(b) Permitting the currency to seek its worth in the international market
(c) Fixing the value of the currency in conjunction with the movement in the value of a basket of pre-determined currencies
(d) Fixing the value of currency in multilateral consultation with the IMF, the World Bank and major trading partners

85. The central banking functions in India are performed by the

I. Central Bank of India
II. Reserve Bank of India
III. State Bank of India
IV. Punjab National Bank

(a) I, II
(b) II
(c) I
(d) II, III

86. The first Hydro Electric Plant of Karnataka State was built across

(a) Kaveri at Shivanasamudra
(b) Kaveri at Krishnaraja Sagara
(c) Sharavathi at Gerusoppe
(d) Thungabhadra at Hospete



www.shikarat.com

87. ಇವುಗಳಲ್ಲಿ ಯಾವುದು ಕರ್ನಾಟಕದಲ್ಲಿನ ವಿದ್ಯುತ್ ಪೂರೈಕೆ ಕಂಪೆನಿ (ಸಂಸ್ಥೆ) ಯಲ್ಲ ?
(a) ಟೆಸ್ಕಾಂ (TESCOM)
(b) ಸೆಸ್ಕಾಂ (CESCOM)
(c) ಹೆಸ್ಕಾಂ (HESCOM)
(d) ಗೆಸ್ಕಾಂ (GESCOM)

88. ಇವುಗಳಲ್ಲಿ ಯಾವುದು ಕರ್ನಾಟಕದ ಪೂರ್ವಾಭಿಮುಖವಾಗಿ ಹರಿಯುವ ನದಿಯಲ್ಲ ?
(a) ಕಾವೇರಿ
(b) ತುಂಗಭದ್ರಾ
(c) ಶರಾವತಿ
(d) ಭೀಮಾ

89. ಕರ್ನಾಟಕದ ಅತ್ಯಂತ ಎತ್ತರದ ಶಿಖರ ಇದಾಗಿದೆ
(a) ಮುಳ್ಳಯ್ಯನ ಗಿರಿ
(b) ಕೊಡಚಾದ್ರಿ
(c) ಕೆಮ್ಮಣ್ಣುಗುಂಡಿ
(d) ಕುದುರೆಮುಖ

90. ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಇವುಗಳನ್ನು ಹೊಂದಿಸಿ :

| | |
|---|---|
| A. ಗೋಕಾಕ್ ಜಲಪಾತ | 1. ಮಂಡ್ಯ |
| B. ಅಬ್ಬೆ ಜಲಪಾತ | 2. ಶಿವಮೊಗ್ಗ |
| C. ಗೇರುಸೊಪ್ಪೆ ಜಲಪಾತ | 3. ಬೆಳಗಾವಿ |
| D. ಭರಚುಕ್ಕಿ ಜಲಪಾತ | 4. ಕೊಡಗು |

(a) A-2, B-3, C-1, D-4
(b) A-3, B-1, C-4, D-2
(c) A-3, B-4, C-2, D-1
(d) A-2, B-4, C-1, D-3

91. ಭಾರತದಲ್ಲಿ ಸ್ಥಳೀಯವಾಗಿ ನಿರ್ಮಿಸಲ್ಪಟ್ಟ ಪರಮಾಣು ವಿದ್ಯುತ್ ಕೇಂದ್ರ ಯಾವುದು ?
(a) ಕಲ್ಪಕ್ಕಮ್
(b) ನರೋರ
(c) ರಾವತ್ ಭಟ
(d) ತಾರಾಪೊರ್

87. Which of the following is not a Electricity supply Company in Karnataka ?
(a) TESCOM
(b) CESCOM
(c) HESCOM
(d) GESCOM

88. Which of the following is not a East Flowing river of Karnataka ?
(a) Kaveri
(b) Thungabhadra
(c) Sharavathi
(d) Bhima

89. The Highest peak in Karnataka is
(a) Mullayyana Giri
(b) Kodachadri
(c) Kemmangundi
(d) Kudremukh

90. Match the following with respect to Karnataka State :

| | |
|---|---|
| A. Gokak Falls | 1. Mandya |
| B. Abbe Falls | 2. Shivamogga |
| C. Gerusoppe Falls | 3. Belagaum |
| D. Barachukki Falls | 4. Kodagu |

(a) A-2, B-3, C-1, D-4
(b) A-3, B-1, C-4, D-2
(c) A-3, B-4, C-2, D-1
(d) A-2, B-4, C-1, D-3

91. Which atomic power station in India is built completely indigenously ?
(a) Kalpakkam
(b) Narora
(c) Rawat Bhata
(d) Tarapore

www.shikarat.com

92. ಈ ಕೆಳಗಿನ ನದಿಗಳಲ್ಲಿ ಮೇಲ್ಪೈನ ಒಳಚರಂಡಿ ವ್ಯವಸ್ಥೆಯ ಉದಾಹರಣೆ ಯಾವುದು ?
(a) ಬಾನಸ್
(b) ಚಂಬಾಲ್
(c) ಸರಸ್ವತಿ
(d) ಗೋಮ್ತಿ

92. Which among the following river is an example of a superimposed drainage system ?
(a) Banas
(b) Chambal
(c) Saraswati
(d) Gomti

93. ಭಾರತದ ಕೇಂದ್ರಾಡಳಿತದ ಪ್ರದೇಶಗಳಲ್ಲಿ ಅತಿ ಹೆಚ್ಚು ಚದುರ ಅಡಿವುಳ್ಳದ್ದು ಈ ಕೆಳಗಿನವುಗಳಲ್ಲಿ ಯಾವುದು ?
(a) ದೆಹಲಿ
(b) ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹಗಳು
(c) ದಾದ್ರ ಮತ್ತು ನಗರ್ ಹವೇಲಿ
(d) ಚಂಡೀಗಢ

93. Which among the following Union Territory of India has largest Area ?
(a) Delhi
(b) Andaman and Nicobar Islands
(c) Dadra and Nagar Haveli
(d) Chandigarh

94. 'ಮುಲ್ಲಪೆರಿಯಾರ್ ಅಣೆಕಟ್ಟು' ಯಾವ ಎರಡು ರಾಜ್ಯಗಳ ನಡುವಿನ ದೀರ್ಘಕಾಲದಿಂದ ಬಾಕಿಯಾಗಿ ಉಳಿದ ವಿಷಯವಾಗಿದೆ ?
(a) ಕರ್ನಾಟಕ ಮತ್ತು ಕೇರಳ
(b) ಆಂಧ್ರಪ್ರದೇಶ ಮತ್ತು ತಮಿಳುನಾಡು
(c) ಕರ್ನಾಟಕ ಮತ್ತು ತಮಿಳುನಾಡು
(d) ತಮಿಳುನಾಡು ಮತ್ತು ಕೇರಳ

94. "Mullaperiyar Dam" has been a long pending issue between which of the following two States ?
(a) Karnataka and Kerala
(b) Andhra Pradesh and Tamil Nadu
(c) Karnataka and Tamil Nadu
(d) Tamil Nadu and Kerala

95. ಲಾಲ್‌ಬಕಿಯಾ, ಬಾಗ್‌ಮತಿ ಮತ್ತು ಕಮ್ಲಾ ನದಿಗಳ ಉದ್ದಕ್ಕೂ ಒಡ್ಡು ಏರಿಕೆಯ/ಅಣೆಕಟ್ಟಿನ (ಎಂಬ್ಯಾಂಕ್‌ಮೆಂಟ್) ಸಬಲೀಕರಣ ಮತ್ತು ವಿಸ್ತೀರ್ಣತೆಯ ವಿಚಾರದಲ್ಲಿ ಭಾರತವು ಕೆಳಗಿನ ಯಾವ ನೆರೆಯ ದೇಶಕ್ಕೆ ಸಹಕಾರ ಒದಗಿಸುತ್ತಾ ಇದೆ ?
(a) ಬಾಂಗ್ಲಾದೇಶ
(b) ನೇಪಾಳ
(c) ಪಾಕಿಸ್ತಾನ
(d) ಮ್ಯಾನ್‌ಮಾರ್

95. India has been providing assistance to which among the following neighbors for strengthening and extension of embankments along Lalbakeya, Bagmati and Kamla rivers ?
(a) Bangladesh
(b) Nepal
(c) Pakistan
(d) Myanmar

96. 1780-1784 ರ ಮಂಗಳೂರು ಒಪ್ಪಂದಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ನಿಜವಲ್ಲ ?
(a) ಈ ಒಪ್ಪಂದದೊಂದಿಗೆ ಎರಡನೆಯ ಆಂಗ್ಲೋ ಮೈಸೂರು ಯುದ್ಧ ಸಮಾಪ್ತಿಗೊಂಡಿತು
(b) ಟಿಪ್ಪು ಸುಲ್ತಾನ ಮತ್ತು ಬ್ರಿಟಿಷರ ನಡುವಿನ ಒಪ್ಪಂದಕ್ಕೆ ಸಹಿ ಹಾಕಲಾಯಿತು
(c) ಒಪ್ಪಂದದ ಪ್ರಕಾರ ಬ್ರಿಟಿಷರು ಮಲಬಾರ್ ಬಿಟ್ಟು ತೆರಳಿದರು ಮತ್ತು ಕಾರ್ನಾಟಿಕ್ ಮೇಲೆ ಮತ್ತೆ ಹಿಡಿತ ಸಾಧಿಸಿದರು
(d) ಒಪ್ಪಂದ ಒಂದು ನೀತಿಯಾಗಿತ್ತು ಮತ್ತು ಬ್ರಿಟಿಷರಿಗೆ ಮಾನಸಿಕ ವಿಜಯವಾಗಿತ್ತು

96. Which of the following is false with regards to the treaty of Mangalore of 1780-1784 ?
(a) The Second Anglo Mysore war came to an end with this treaty
(b) The treaty was signed between Tippu Sulthan and the British
(c) As per the treaty British left from the Malabar and regained control over Carnatic
(d) The treaty was a moral and psychological victory to the British



www.sbkarat.com

97. ಈ ಕೆಳಗಿನವುಗಳಲ್ಲಿ ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನಿಗೆ ಸಂಬಂಧಪಟ್ಟಂತೆ ಯಾವುದು ಸರಿಯಾಗಿದೆ ?

(a) ವಿಷ್ಣುವರ್ಧನ ಚೋಳರ ಗಂಗವಾಡಿ ಸಂಸ್ಥಾನವನ್ನು ವಶಪಡಿಸಿಕೊಂಡನು

(b) ವಿಷ್ಣುವರ್ಧನ ಮೂಲತಃ ಜೈನನಾಗಿದ್ದು ವೈಷ್ಣವ ಧರ್ಮಕ್ಕೆ ಪರಿವರ್ತಿತನಾದನು

(c) ವಿಷ್ಣುವರ್ಧನ ಮೊದಲನೆಯ ನರಸಿಂಹ ದೊರೆಯ ಉತ್ತರಾಧಿಕಾರಿಯಾದನು

(d) ವಿಷ್ಣುವರ್ಧನ ಮೊದಲು ವೈಷ್ಣವನಾಗಿದ್ದು ಜೈನಧರ್ಮಕ್ಕೆ ಧರ್ಮಾಂತರಗೊಂಡನು

98. ಬೀದರ್‌ನಲ್ಲಿ ಪ್ರಸಿದ್ಧವಾದ ಮದರಸಾ ಸ್ಥಾಪಿಸಿದವರು

(a) ಆಲಿ ಆದಿಲ್ ಷಾ

(b) ಮೊಹಮ್ಮದ್ ಗವಾನ್

(c) ಮೊಹಮ್ಮದ್ ಷಾ I

(d) ಅಲ್ಲಾವುದ್ದೀನ್ ಬಹಮನ್ ಷಾ

99. ಯಾವ ಅರಸರ ಕಾಲದಲ್ಲಿ ಚೀನಾದ ಬೌದ್ಧ ಯಾತ್ರಿ ಹ್ಯುಯೆನ್‌ತ್ಸಾಂಗ್ ಕರ್ನಾಟಕ್ಕೆ ಭೇಟಿ ನೀಡಿದನು ?

(a) ಚಾಲ್ಯುಕರ ಸಾಮ್ರಾಜ್ಯದ ಎರಡನೆಯ ಪುಲಕೇಶಿ

(b) ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣ ದೇವರಾಯ

(c) ಗುಪ್ತ ಸಾಮ್ರಾಜ್ಯದ ಎರಡನೆಯ ಚಂದ್ರಗುಪ್ತ

(d) ಗುಪ್ತ ಸಮ್ರಾಜ್ಯದ ಸಮುದ್ರಗುಪ್ತ

100. ಇವುಗಳಲ್ಲಿ ಯಾವ ರಾಷ್ಟ್ರೀಕೃತ ಬ್ಯಾಂಕ್ ಕರ್ನಾಟಕದಲ್ಲಿ ಆರಂಭಿಸಲ್ಪಟ್ಟಿದ್ದಲ್ಲ ?

(a) ಸಿಂಡಿಕೇಟ್ ಬ್ಯಾಂಕ್

(b) ಇಂಡಿಯನ್ ಬ್ಯಾಂಕ್

(c) ವಿಜಯಾ ಬ್ಯಾಂಕ್

(d) ಕಾರ್ಪೊರೇಷನ್ ಬ್ಯಾಂಕ್

97. Which among the following is true in respect of Vishnuvardhana the Hoysala Emperor ?

(a) Vishnuvardhana annexed the Chola province of Gangavadi

(b) Vishnuvardhana was originally a Jain converted to Vaishnavism

(c) Vishnuvardhana was succeeded by Narasimha I

(d) Vishnuvardhana was originally a Vaishnavaite converted to Jainism

98. The famous Madrasa at Bidar was established by

(a) Ali Adil Shah

(b) Mohammed Gawan

(c) Mohammed Shah I

(d) Ala-ud-din Bahaman Shah

99. The Chinese pilgrim Huentsang visited Karnataka during

(a) Pulakeshi II the Chalukya Empire

(b) Sri Krishnadevaraya of Vijayanagara Empire

(c) Chandragupta II of the Gupta Empire

(d) Samudragupta of the Gupta Empire

100. Which of the following Nationalised Banks did not originate from Karnataka ?

(a) Syndicate Bank

(b) Indian Bank

(c) Vijaya Bank

(d) Corporation Bank

www.shikarat.com

Series

**C**

# Question Paper – 2018
# (Paper – II)

QUESTION BOOKLET SERIAL No.

## Instructions to Candidates

Maximum Marks : 150

Time : 90 Minutes

1. The question paper contains 100 questions. All questions carry equal marks. Each question carries 1.50 mark. 25% marks will be deducted i.e., 0.375 for every wrong answer.
2. Please enter your application number, registration number and the serial number of the question paper in appropriate boxes of your answer sheet. Also ensure that your left hand thumb impression is affixed on the OMR sheet. Your signature and your room Invigilator's signature should be there on the answer sheet.
3. Write down clearly the Question Booklet version code **(A, B, C, D or E)** as the case may be in the appropriate space provided for the purpose in the OMR Answer Sheet.
4. Please mark your answers only on the OMR sheets provided. Use **Black or Blue Ball Point Pen** only. Candidates can take a copy of their answer sheet with them after the examination.
5. Overwriting, marking multiple answers will be considered as wrong answers and 25% i.e., 0.375 marks will be deducted for such answer. Leaving a question unanswered will get zero mark.
6. Candidates involved in copying, discussion with other candidates and other disruptive activities will be '**debarred**' from the examination.
7. Mobile Phone, Calculators, Pager of any such gadget will not be allowed inside the examination hall.
8. Doubts regarding any question / answer in the booklet may be checked with the English version for clarification. Candidates are not allowed to leave the examination hall till the examination is over.
9. Any mistakes in the question paper like printing mistake, pages are interchanged, repetition of questions, any page missing or any other discrepancies may immediately be informed to the room Invigilator and get clarification or take correct question paper. Candidates should get clarification of such mistake in the examination hall itself otherwise candidates would be held responsible.
10. Immediately after the Final Bell indicating the completion of the examination, stop making any further marking in the OMR Answer Sheet. You are instructed to remain seated at your place till OMR Answer Sheets of all the candidates present in the hall are collected by the Invigilator and further you can leave the examination hall as permitted by the Invigilator.

www.shikarat.com